ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ಜೆಪಿ ಪಾರ್ಕ್ ವಾರ್ಡ್ ನಂ.17 ರಲ್ಲಿ ಶಾಲಾ ಕಟ್ಟಡ ನಿರ್ಮಿಸುವ ಬಗ್ಗೆ ಪುಟದ ಸಂಖ್ಯೆ -1-

ಕಡತದ ಸಂಖ್ಯೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	ವಿಷಯ:-ಜೆ.ಪಿ ಪಾರ್ಕ್ ವಾರ್ಡ್ ನಂ.17 ರಲ್ಲಿ ನಿರ್ಮಿಸಲು ಉದ್ದೇಶಿಸಿರುವ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಹೆಚ್ಚುವರಿ ಅನುದಾನ ನೀಡಿ ಒಂದೇ ಜಾಬ್ ಸಂಖ್ಯೆ ನೀಡುವ ಬಗ್ಗೆ.
	**********
	ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.17 ಜೆ.ಪಿ ಪಾರ್ಕ್‌ನಲ್ಲಿ 1000 ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಜಿ+2 ಶಾಲಾ ಕಟ್ಟಡವನ್ನು ನಿರ್ಮಿಸಲು 2018-19ನೇ ಸಾಲಿನ ಪಾಲಿಕೆ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3460 ಅಡಿಯಲ್ಲಿ "CONSTRUCTION OF GANESHA IMMERSION CENTER AND OTHER BUILDING WORKS AT RR NAGARA ZONE, WARD NO.17 ರ ಕಾಮಗಾರಿಗೆ ರೂ.500.00 ಲಕ್ಷಗಳಿಗೆ ಜಾಬ್ ಸಂಖ್ಯೆ ಪಡೆದು ಕಾರ್ಯಾದೇಶ ನೀಡಲಾಗಿದ್ದು, ಗುತ್ತಿಗೆದಾರರು ಕಾಮಗಾರಿ ಪ್ರಾರಂಭಿಸದೇ ಇರುವುದರಿಂದ ಮಾನ್ಯ ಮುಖ್ಯ ಆಯುಕ್ತರಿಂದ ಮರು ಟೆಂಡರ್ ಕರೆಯಲು ಅನುಮೋದನೆ ದೊರೆತಿರುತ್ತದೆ.
	ಮುಂದುವರೆದು ವಾರ್ಡ್ ನಂ.37 ಯಶವಂತಪುರ ಬಿಬಿಎಂಪಿ ರಾಜರಾಜೇಶ್ವರಿ ಪಬ್ಲಿಕ್ ಶಾಲೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಬಳಕೆ ಮಾಡಿಕೊಳ್ಳುವ ಸಲುವಾಗಿ ಉಪಯೋಗಿಸಿಕೊಳ್ಳಲಾಗಿದ್ದು. ಮುಂದಿನ ದಿನಗಳಲ್ಲಿ ಸದರಿ ಕಟ್ಟಡವನ್ನು ಶಾಲೆಗೆ ಬಳಸಿಕೊಳ್ಳಲು ಸಾಧ್ಯವಿರುವುದಿಲ್ಲ. ಹಾಲಿ ಇಲ್ಲಿ ವ್ಯಾಸಂಗ ಮಾಡುತ್ತಿರುವ ಸುಮಾರು ೮೦೦ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅಡಚಣೆ ಉಂಟಾಗುತ್ತಿದೆ. ಪ್ರಸ್ತುತ ಈಗಾಗಲೇ ವಾರ್ಡ್ ನಂ.17 ರಲ್ಲಿ ಶಾಲಾ ಕಟ್ಟಡವನ್ನು ನಿರ್ಮಿಸಲು ರೂ. ೫೦೦.೦೦ ಲಕ್ಷಗಳಿಗೆ ಅನುಮೋದನೆ ದೊರೆತಿದ್ದು. ಇದೇ ವಾರ್ಡ್
2	ನಂ.37 ಯಶವಂತಪುರ ಬಿಬಿಎಂಪಿ ರಾಜರಾಜೇಶ್ವರಿ ಪಬ್ಲಿಕ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ೮೦೦ ವಿದ್ಯಾರ್ಥಿಗಳಿಗೆ ಇದೇ ಕಟ್ಟಡದಲ್ಲಿ ಹೆಚ್ಚುವರಿ ಅಂತಸ್ತು ನಿರ್ಮಿಸಿ. ಒಟ್ಟು 1೮೦೦ ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅನುಕೂಲವಾಗುವಂತೆ ಜಿ+೩ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದ್ದು. ಹೆಚ್ಚುವರಿಯಾಗಿ ೫೦೦.೦೦ ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ. ಆದರೆ ಬಿಬಿಎಂಪಿ ಆಯವ್ಯಯದಲ್ಲಿ ಹೆಚ್ಚುವರಿ ಅನುದಾನ ನೀಡಲು ಸಾಧ್ಯವಿರುವುದಿಲ್ಲ ಎಂದು ತಿಳಿದು ಬಂದಿರುತ್ತದೆ. ಈಗಾಗಲೇ ರಾಜರಾಜೇಶ್ವರಿನಗರ ವಿಭಾಗದಿಂದ ಜಾಬ್ ಸಂಖ್ಯೆ ಪಡೆದಿರುವ ಕೆಲವೊಂದು ಕಾಮಗಾರಿಗಳು ಫ್ರೀಜ್ (Freeze) ಆಗಿರುತ್ತವೆ.
	ಪಾಲಿಕೆಯ ಅನುದಾನದಲ್ಲಿ ಈಗಾಗಲೇ ಜಾಬ್ ಸಂಖ್ಯೆ ಪಡೆದು ಕಾರ್ಯಾದೇಶ ನೀಡದೆ ಫ್ರೀಜ್ (Freeze) ಆಗಿರುವ ಹಾಗೂ ಅವಶ್ಯಕತೆಯಿಲ್ಲದ ಕೆಲವೊಂದು ಕಾಮಗಾರಿಗಳನ್ನು ರದ್ದುಪಡಿಸಿ ಸದರಿ ಅನುದಾನದಲ್ಲಿ ಶಾಲಾ ಕಟ್ಟಡ ನಿರ್ಮಿಸಲು ಅವಶ್ಯಕವಿಗುವ ಹೆಚ್ಚುವರಿ
3	ಅನುದಾನ ರೂ.೫೦೦.೦೦ ಲಕ್ಷಗಳಿಗೆ Additional grant for construction of school building in ward No.17 J.P Park ಕಾಮಗಾರಿಗೆ ಹೊಸ ಜಾಬ್ ಸಂಖ್ಯೆ ನೀಡಲು ಅನುಮೋದನೆ ನೀಡಿ. ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳಲು ಮಾನ್ಯ ಶಾಸಕರು. ರಾಜರಾಜೇಶ್ವರಿನಗರ ರವರು ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರಿಗೆ ಪತ್ರ ಮುಖೇನ ಕೋರಿರುತ್ತಾರೆ.

ಪು.ತಿ.ನೋ

Scanned by TapScanner

ವಿಷಯ :

ಪುಟದ ಸಂಖ್ಯೆ ..... – 2 –

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಾಮಗಾರಿಗಳ ವಿವರ ಕೆಳಕಂಡಂತಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಲೆಕ್ಕ ಶೀರ್ಷಿಕೆ	ಜಾಬ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಷರಾ
01	Improvements of Roads, Drains and culverts at Railway Bhavani Layout and RTO Surrounding areas in Ward No.129	P-3525	129-19-000023	100.00	ಜಾಬ್ ಸಂಖ್ಯೆ Freeze ಆಗಿದೆ.
02	Improvements of Roads, Drains and culverts at Balaji Layout, Geological Layout and Surrounding area in Ward No.129	P-3525	129-19-000022	100.00	
03	Depo collection in Lakshmidevi nagara in Ward No.42	P-1771	042-19-000024	30.00	
04	The Renovation of existing ground floor of BBMP Girls High School and PU College at Gokula 1st Phase Bangalore-54 in Ward No.17	P-3520	017-19-000011	100.00	
05	Development of Roads in Sundar nagara, Poornapura and Chennappa garden in Ward No.17	P3726	017-20-000037	180.00	ಕಾಮಗಾರಿ ಅವಶ್ಯಕತೆ ಇರುವುದಿಲ್ಲ
06	CONSTRUCTION OF GANESHA IMMERSION CENTER AND OTHER BUILDING WORKS AT RR NAGARA ZONE, WARD NO.17	P3460	017-19-000004	500.00	ಈಗಾಗಲೇ ಕಾರ್ಯದೇಶ ನೀಡಿದ್ದು, ಮರು ಟೆಂಡರ್ ಕರೆಯಲು ಅನುಮೋದನೆ ದೊರೆತ್ತಿರುತ್ತದೆ.
				1010.00	

ಮೇಲ್ಕಂಡ ಎಲ್ಲಾ ಕಾಮಗಾರಿಗಳಿಗೆ ಪಾಲಿಕೆಯ 2018-19 ಮತ್ತು 2019-20ನೇ ಸಾಲಿನ ಅಯವ್ಯಯದಲ್ಲಿ ರಾಜರಾಜೇಶ್ವರಿನಗರ ವಿಭಾಗ ಹಾಗೂ ಯೋಜನಾ ವಿಭಾಗ ವತಿಯಿಂದ ಮೇಲ್ಕಂಡ ಕಾಮಗಾರಿಗಳಿಗೆ ಅನುಮೋದನೆ ಪಡೆದು ಜಾಬ್‌ಸಂಖ್ಯೆ ಪಡೆಯಲಾಗಿರುತ್ತದೆ. ಕ್ರಮಸಂಖ್ಯೆ: (1) ರಿಂದ (4) ರವರೆಗಿನ ಕಾಮಗಾರಿಗಳು ಫ್ರೀಜ್ ಆಗಿದ್ದು. ಕ್ರಮಸಂಖ್ಯೆ (5) ರ ಕಾಮಗಾರಿಯ ಸ್ಥಳಗಳಲ್ಲಿ ನವನಗರೋತ್ಥಾನ ಅನುದಾನದಡಿಯಲ್ಲಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಹಾಗೂ ಕ್ರಮಸಂಖ್ಯೆ (6) ರ ಕಾಮಗಾರಿಗೆ ಶಾಲಾ ಕಟ್ಟಡ ನಿರ್ಮಾಣ ಮಾಡಲು ಕಾರ್ಯಾದೇಶ ನೀಡಿದ್ದು ಗುತ್ತಿಗೆದಾರರು ಕಾಮಗಾರಿ ಪ್ರಾರಂಭಿಸದೇ ಇದ್ದುದರಿಂದ ಮರು ಟೆಂಡರ್ ಕರೆಯಲು ಹಾಗೂ ಜಾಬ್ ಸಂಖ್ಯೆ ಡಿ-ಫ್ರೀಜ್ (D-Freeze) ಮಾಡಲು [redacted]

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳಿ

ವಿಷಯ ..... 2/22 ಸಿಲ್ಕ್ ನಿಧಿಯ ಬಗ್ಗೆ ..... ಪುಟದ ಸಂಖ್ಯೆ ..... - 3 -

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
6	ಮಾನ್ಯ ಮುಖ್ಯ ಆಯುಕ್ತರ ಅನುಮೋದನೆ ದೊರೆತ್ತಿರುತ್ತದೆ. ಕ್ರಮಸಂಖ್ಯೆ (1) ರಿಂದ (5) ರವರೆಗಿನ ಕಾಮಗಾರಿಗಳಿಗೆ ಇದುವರೆಗೂ ಕಾರ್ಯಾದೇಶ ನೀಡಿರುವುದಿಲ್ಲ ಹಾಗೂ ಯಾವುದೇ ಬಿಲ್ಲುಗಳನ್ನು ಕ್ಲೇಮು ಮಾಡಿರುವುದಿಲ್ಲ. ಕ್ರಮ ಸಂಖ್ಯೆ (6) ರ ಕಾಮಗಾರಿಗೆ ಈ ಮುಂಚೆ ಕಾರ್ಯಾದೇಶ ನೀಡಿದ್ದರು ಸಹ ಯಾವುದೇ ಬಿಲ್ಲು ಕ್ಲೇಮು ಮಾಡಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ. ಸದರಿ ಶಾಲಾ ಕಟ್ಟಡ ನಿರ್ಮಾಣ ಮಾಡಲು **ರೂ. 1000.00 ಲಕ್ಷಗಳಿಗೆ** ಒಂದೇ ಕಾಮಗಾರಿಯನ್ನಾಗಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದಲ್ಲಿ ಕಾಮಗಾರಿ ನಿರ್ವಹಿಸುವುದು ಸುಲಭವಾಗಿರುತ್ತದೆ. ಸದರಿ ಪ್ರಸ್ತಾವನೆಗೆ ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರು ಕಡತವನ್ನು ಮಂಡಿಸಲು ಸೂಚಿಸಿರುತ್ತಾರೆ. ಆದ್ದರಿಂದ ಮೇಲ್ಕಂಡ 6 ಕಾಮಗಾರಿಗಳನ್ನು ರದ್ದುಪಡಿಸಿ ವಾರ್ಡ್ ನಂ. 17 ರಲ್ಲಿ ಶಾಲಾ ಕಟ್ಟಡ ನಿರ್ಮಿಸಲು ಅವಶ್ಯಕವಿರುವ ಹೆಚ್ಚುವರಿ ಅನುದಾನ ಸೇರಿದಂತೆ **Construction of school building in ward No.17 J.P Park** ಕಾಮಗಾರಿಗೆ ಒಟ್ಟು **ರೂ. 1000.00 ಲಕ್ಷಗಳಿಗೆ** ಅನುದಾನ ನೀಡಿ ಹೊಸ ಜಾಬ್‌ಸಂಖ್ಯೆ ನೀಡಲು ಅನುಮೋದನೆ ಕೋರಿ ಮುಂದಿನ ಆದೇಶಕ್ಕಾಗಿ ಕಡತವನ್ನು ಮಂಡಿಸಿದೆ. B.k. Ramakrishna ಸಹಾಯಕ ಕಾರ್ಯಪಾಲಕ ಅಭಿಯಂತರರು(ಯೋ) ರಾಜರಾಜೇಶ್ವರಿನಗರ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
7	ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋ) ರಾಜರಾಜೇಶ್ವರಿ ನಗರ ವಲಯ ಸಂಖ್ಯೆ: ಪಾಲಿಕೆ/ಕಾ.ಅ.ಇ/ಯೋ/ರಾ.ರಾ.ನ.ವ/ 64/2021-22 ದಿನಾಂಕ: 19/04/2021 ಕಾರ್ಯಪಾಲಕ ಅಭಿಯಂತರರು (ಯೋಜನೆ) ರಾಜರಾಜೇಶ್ವರಿ ನಗರ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ E.E(Proj) M.Shivakumar Executive Engineer (Project) Bruhat Bangalore Mahanagar Palike Rajarajeshwari Nagar Zone ಎಇಇ.ಪಿ(ರಾಜಾಜಿನಗರ) TA As discussed pl log up note Nagaraj

Scanned by TapScanner

ವಿಷಯ :

ಪುಟದ ಸಂಖ್ಯೆ ..... - 4 -

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
10	ಕಂಡಿಕೆ (01) ರಿಂದ (07) ರವರೆಗಿನ ಕಾ.ಪಾ.ಅ(ಯೋಜನೆ) ವಿಭಾಗ ರವರು ಸಲ್ಲಿಸಿರುವ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, ಕಂಡಿಕೆ (04) ರಲ್ಲಿ ವಿವರಿಸಿರುವ ಒಟ್ಟು 06 ಕಾಮಗಾರಿಗಳಲ್ಲಿ ಕ್ರ.ಸಂ.01 ರಿಂದ 04 ರವರೆಗಿನ ಕಾಮಗಾರಿಯ ಜಾಬ್‌ಸಂಖ್ಯೆಗಳು ಫ್ರೀಜ್ ಆಗಿದ್ದು, ಮತ್ತು ಕ್ರ.ಸಂ.05 ರ ಕಾಮಗಾರಿಯ ಸ್ಥಳದಲ್ಲಿ, ನಗರೋತ್ಥಾನ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಕ್ರ.ಸಂ.06 ರ ಕಾಮಗಾರಿಗೆ ಕಾರ್ಯಾದೇಶ ನೀಡಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ ಮತ್ತು ಜಾಬ್‌ಸಂಖ್ಯೆಯು ಫ್ರೀಜ್ ಆಗಿದ್ದರಿಂದ ಮರು ಟೆಂಡರ್ ಕರೆಯಲು ಹಾಗೂ ಸದರಿ ಜಾಬ್‌ಸಂಖ್ಯೆಯನ್ನು ಡಿ-ಫ್ರೀಜ್ ಮಾಡಲು ಮಾನ್ಯ ಮುಖ್ಯ ಆಯುಕ್ತರು ರವರಿಂದ ಅನುಮೋದನೆ ದೊರೆತಿರುತ್ತದೆ. ಕಂಡಿಕೆ(04) ರಲ್ಲಿ ವಿವರಿಸಿರುವ ಒಟ್ಟು 06 ಕಾಮಗಾರಿಗೆಗಳಿಗೆ ಯಾವುದೇ ಬಿಲ್ ಕ್ಲೈಮ್ ಮಾಡಿರುವುದಿಲ್ಲವದೆಂದು ಕಾ.ಪಾ.ಅ(ಯೋಜನೆ) ವಿಭಾಗ ರವರು ದೃಢೀಕರಿಸಿರುತ್ತಾರೆ. ಆದ್ದರಿಂದ ಮೇಲ್ಕಂಡ ಕಂಡಿಕೆ (04) ರಲ್ಲಿ ನಮೂದಿಸಿರುವ ಕ್ರ.ಸಂ.01 ರಿಂದ 06 ರವರೆಗಿನ 6 ಕಾಮಗಾರಿಗಳನ್ನು ರದ್ದುಪಡಿಸಿ, ಸದರಿ 06 ಕಾಮಗಾರಿಗಳ ಅನುದಾನವನ್ನು ವಾರ್ಡ್ ನಂ.17 ರಲ್ಲಿ ಶಾಲಾ ಕಟ್ಟಡ ನಿರ್ಮಿಸಲು **Construction of school building in ward No.17 J.P Park** ಕಾಮಗಾರಿಗೆ ಒಟ್ಟು **ರೂ.1000.00 ಲಕ್ಷಗಳಿಗೆ ಹೊಸ ಜಾಬ್‌ಸಂಖ್ಯೆ ನೀಡಲು ಅನುಮೋದನೆ ಕೋರಿ** ಕಾ.ಪಾ.ಅ(ಯೋಜನೆ) ರವರು ಶಿಫಾರಸ್ಸು ಮಾಡಿರುವುದನ್ನು ಪರಿಗಣಿಸುವ ಬಗ್ಗೆ ಮಾನ್ಯ ವಿಶೇಷ ಆಯುಕ್ತರು(ಹಣಕಾಸು) ರವರಿಗೆ ಮಂಡಿಸಿದೆ. (ಸೂಚನೆ ಲಗತ್ತಿಸಿದೆ) ಮುಖ್ಯ ಅಭಿಯಂತರರು 9/6/2021 ರಾಜರಾಜೇಶ್ವರಿ ನಗರ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
11	ಸಹಿ/ಅಂಕಿತ (ಕನ್ನಡ)
12	Pls put up in coffice 9/6/21 Special Commissioner (Finance) BRUHAT BENGALURU MAHANAGARA PALIKE
13)	put up in e-office with details 9/6/21
14)	11 09/06/2021 A(F) 9/6 ಸಂ.ಆ

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ .....

ಪುಟದ ಸಂಖ್ಯೆ ..... (5)

.....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

Note # 1 Note Sheet.pdf

10/06/2021 12:39 PM

VENKATESH A S
(SECOND DIVISION ASSISTANT)

Note # 2

ಲಗತ್ತಿಸಿರುವ ಕಡತದ ಕಂಡಿಕೆ (12) ರ ಆದೇಶದಂತೆ ಇಆಪೀಸ್ ಮೂಲಕ ಕಡತ ಮಂಡಿಸಿದೆ ಕಂಡಿಕೆ (1) ರಿಂದ (11) ರ ವರಗಿನ ಕಾರ್ಯಪಾಲಕ ಅಭಿಯಂತರರು (ಯೋಜನೆ - ರಾಜರಾಜೇಶ್ವರಿ ನಗರ) ಮತ್ತು ಮುಖ್ಯ ಅಭಿಯಂತರರು (ರಾಜರಾಜೇಶ್ವರಿ ನಗರ) ರವರ ಪ್ರಸ್ತಾವನೆಯನ್ನು ಅವಹಾಹಿಸಲು ಕೋರಿದೆ. ವಾರ್ಡ್ ನಂ.37 ಯಶವಂತಪುರ ಬಿಬಿಎಂಪಿ ರಾಜರಾಜೇಶ್ವರಿ ಪಬ್ಲಿಕ್ ಶಾಲೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಬಳಕೆ ಮಾಡಿಕೊಳ್ಳುವ ಸಲುವಾಗಿ ಉಪಯೋಗಿಸಿಕೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಸದರಿ ಕಟ್ಟಡವನ್ನು ಶಾಲೆಗೆ ಬಳಸಿಕೊಳ್ಳಲು ಸಾಧ್ಯವಿರುವುದಿಲ್ಲ. ಪ್ರಸ್ತುತ ಈಗಾಗಲೇ ವಾರ್ಡ್ ನಂ.17 ರಲ್ಲಿ ಶಾಲಾ ಕಟ್ಟಡವನ್ನು ನಿರ್ಮಿಸಲು ರೂ. 500.00 ಲಕ್ಷಗಳಿಗೆ ಅನುಮೋದನೆ ದೊರೆತಿದ್ದು, ಈಗಾಗಲೇ ರಾಜರಾಜೇಶ್ವರಿನಗರ ವಿಭಾಗದಿಂದ ಜಾಬ್ ಸಂಖ್ಯೆ ಪಡೆದಿರುವ ಕೆಲವೊಂದು ಕಾಮಗಾರಿಗಳು ಫ್ರೀಜ್ ಆಗಿರುತ್ತವೆ. ಪಾಲಿಕೆಯ ಅನುದಾನದಲ್ಲಿ ಈಗಾಗಲೇ ಜಾಬ್ ಸಂಖ್ಯೆ ಪಡೆದು ಕಾರ್ಯಾದೇಶ ನೀಡದೆ ಫ್ರೀಜ್ ಆಗಿರುವ ಹಾಗೂ ಅವಶ್ಯಕತೆಯಿಲ್ಲದ ಕೆಲವೊಂದು ಕಾಮಗಾರಿಗಳನ್ನು ರದ್ದುಪಡಿಸಿ, ಸದರಿ ಅನುದಾನದಲ್ಲಿ ಶಾಲಾ ಕಟ್ಟಡ ನಿರ್ಮಿಸಲು ಅವಶ್ಯಕವಿರುವ ಹೆಚ್ಚುವರಿ ಅನುದಾನ ರೂ.500.00 ಲಕ್ಷಗಳಿಗೆ ಕಾಮಗಾರಿಗೆ ಹೊಸ ಜಾಬ್ ಸಂಖ್ಯೆ ನೀಡಲು ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ರವರು ತಮ್ಮ ಪತ್ರದ ಮುಖೇನ ಕೋರಿರುತ್ತಾರೆ ಈ ಕೆಳಕಂಡ ಕಾಮಗಾರಿಗಳ ವಿವರವನ್ನು ಲಗತ್ತಿಸಿ ಕ್ರಮಸಂಖ್ಯೆ (1) ರಿಂದ (5) ರವರೆಗಿನ ಕಾಮಗಾರಿಗಳಿಗೆ ಇದುವರೆಗೂ ಕಾರ್ಯಾದೇಶ ನೀಡಿರುವುದಿಲ್ಲ ಹಾಗೂ ಯಾವುದೇ ಬಿಲ್ಲುಗಳನ್ನು ಕ್ಲೇಮು ಮಾಡಿರುವುದಿಲ್ಲ. ಕ್ರಮ ಸಂಖ್ಯೆ (6) ರ ಕಾಮಗಾರಿಗೆ ಈ ಮುಂಚೆ ಕಾರ್ಯಾದೇಶ ನೀಡಿದ್ದರು ಸಹ ಯಾವುದೇ ಬಿಲ್ಲು ಕ್ಲೇಮು ಮಾಡಿರುವುದಿಲ್ಲವೆಂದು ದೃಢೀಕರಿಸಿ ವಾರ್ಡ್ 129, 42, 17ರ 6 ಕಾಮಗಾರಿಗಳನ್ನು ರದ್ದುಪಡಿಸಿ ವಾರ್ಡ್ ನಂ. 17 ರಲ್ಲಿ ಶಾಲಾ ಕಟ್ಟಡ ನಿರ್ಮಿಸಲು ಅವಶ್ಯಕವಿರುವ ಹೆಚ್ಚುವರಿ ಅನುದಾನ ಸೇರಿದಂತೆ ಸೇರಿದಂತೆ **Construction of school building in ward No.17 J.P Park** ಕಾಮಗಾರಿಗೆ ಒಟ್ಟು ರೂ. 1000.00 ಲಕ್ಷಗಳಿಗೆ ಅನುದಾನ ನೀಡಿ ಹೊಸ ಜಾಬ್‌ಸಂಖ್ಯೆ ನೀಡಲು ಅನುಮೋದನೆ ಕೋರಿರುತ್ತಾರೆ.

ಕ್ರ.ಸಂ	ಕಾಮಗಾರಿಯ ಹೆಸರು	ಪಿ-ಕೋಡ್	ಜಾಬ್ ಸಂಖ್ಯೆ	ಅಂದಾಜು ಮೊತ್ತ	ಜಾಬ್ ಸಂಖ್ಯೆ ನೀಡಿರುವ ವರ್ಷ	ಷರಾ
01	Improvements of Roads, Drains and culverts at Railway Bhavani Layout and RTO Surrounding areas in Ward No.129	P-3525	129-19-000023	100.00	2018-19	ಜಾಬ್ ಸಂಖ್ಯೆ ಫ್ರೀಜ್ ಆಗಿರುತ್ತದೆ.
02	Improvements of Roads, Drains and culverts at Balaji Layout, Geological Layout and Surrounding area in Ward No.129	P-3525	129-19-000022	100.00	2018-19	
03	Depo collection in Lakshmidevi nagara in Ward No.42	P-1771	042-19-000024	30.00		
04	The Renovation of existing ground floor of BBMP Girls High School and PU College at Gokula	P-3520	017-19-000011	100.00	2018-19	

ಪು.ತಿ.ನೋ

Rajarajeshwari Nagar Zone

Scanned by TapScanner

ವಿಷಯ :

(6)

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

	05	Development of Roads in Sundar nagara, Poornapura and Chennappa garden in Ward No.17	P3726	017-20-000037	180.00	2019-20	ಕಾಮಗಾರಿ ಅವಶ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ
	06	CONSTRUCTION OF GANESHA IMMERSION CENTER AND OTHER BUILDING WORKS AT RR NAGARA ZONE, WARD NO.17	P3460	017-19-000004	500.00	2018-19	ಈಗಾಗಲೆ ಕಾರ್ಯದೇಶ ನೀಡಿದ್ದು, ಮರು ಟೆಂಡರ್ ಕರೆಯಲು ಅನುಮೋದನೆ ದೊರೆತಿರುತ್ತದೆ ಎಂದು ತಿಳಿಸಿರುತ್ತಾರೆ.
				ಒಟ್ಟು	1010.00		

ಮೇಲ್ಕಂಡ ಜಾಬ್ ಸಂಖ್ಯೆಗಳನ್ನು 2018-19 ರಲ್ಲಿ ಲೆಕ್ಕಶೀಷಿ□ಕೆ ಪಿ3525, ಪಿ1771, ಪಿ3520, ಪಿ3460 ಮತ್ತು 2019-20ರಲೆಕ್ಕಶೀಷಿ□ಕೆ ಪಿ3726 ಅಡಿ ಈಗಾಗಲೆ ಜಾಬ್ ಸಂಖ್ಯೆ ನೀಡಿಲಾಗಿದ್ದು,ಕಾಮಗಾರಿಗಳಿಗೆ ಟೆಂಡರ್ ಕರೆದು IFMS ತತ್ಕಾಂಶದ ಮೂಲಕ ಕಾಯಾ□ದೇಶ ನೀಡದೇ ಇದ್ದುದರಿಂದ ಜಾಬ್ ಸಂಖ್ಯೆಗಳು ಬ್ಲಾಕ್ ಆಗಿರುತ್ತವೆ.ಸದರಿ ಜಾಬ್ ಸಂಖ್ಯೆಗಳು ವಿವಿಧ ಆಧಿ□ಕ ವಷ□ಗಳ ವಿವಿಧ ಲೆಕ್ಕಶೀಷಿ□ಕೆಗಳ ಅಡಿ ನೀಡಲಾಗಿರುವ ಜಾಬ್ ಸಂಖ್ಯೆಗಳಾಗಿರುತ್ತದೆ. ಆಯಾ ಆಧಿ□ಕ ವಷ□ದಲ್ಲಿನ ಒಂದೇ ಲೆಕ್ಕಶೀಷಿ□ಕೆಯ ಜಾಬ್ ಸಂಖ್ಯೆಗಳನ್ನು ಮಾತ್ರ ಪ್ಯಾಕೇಜ್ ಮಾಡಲು ಅವಕಾಶವಿರುತ್ತದೆ. ಇತರೆ ಲೆಕ್ಕಶೀಷಿ□ಕೆಗಳನ್ನು ಹಾಗೂ ಇತರೆ ಆಧಿ□ಕ ವಷ□ದಲ್ಲಿನ ಜಾಬ್ ಸಂಖ್ಯೆಗಳನ್ನು ಒಗ್ಗೂಡಿಸಿ ಒಂದು ಪ್ಯಾಕೇಜ್ ಮಾಡಲು ಅವಕಾಶವಿರುವುದಿಲ್ಲ. ಸದರಿ ಪ್ರಸ್ತಾವನೆಯ ಬಗ್ಗೆ ಮುಂದಿನ ನಿದೇ□ಶನ ಕೋರಿ ಕಡತ ಸಲ್ಲಿಸಿದೆ.

10/06/2021 12:53 PM

SANGEETH KUMAR T
(FIRST DIVISION ASSISTANT)

Note # 3

ನೋಟ್ 02 ರನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸುತ್ತಾ , ಲಗತ್ತಿಸಿರುವ ಕಡತದ ಕಂಡಿಕೆ (12) ರ ಆದೇಶದಂತೆ ಇಆಪೀಸ್ ಮೂಲಕ ಕಡತ ಮಂಡಿಸಿದೆ. ಕಂಡಿಕೆ (1) ರಿಂದ (11) ರ ವರಗಿನ ಕಾರ್ಯ ಪಾಲಕ ಅಭಿಯಂತರರು (ಯೋಜನೆ - ರಾಜರಾಜೇಶ್ವರಿ ನಗರ) ಮತ್ತು ಮುಖ್ಯ ಅಭಿಯಂತರರು (ರಾಜರಾಜೇಶ್ವರಿ ನಗರ) ರವರ ಪ್ರಸ್ತಾವನೆಯನ್ನು ಅವಹಾಹಿಸಲು ಕೋರಿದೆ.

ವಾರ್ಡ್ ನಂ.37 ಯಶವಂತಪುರ ಬಿಬಿಎಂಪಿ ರಾಜರಾಜೇಶ್ವರಿ ಪಬ್ಲಿಕ್ ಶಾಲೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಬಳಕೆ ಮಾಡಿಕೊಳ್ಳುವ ಸಲುವಾಗಿ ಉಪಯೋಗಿಸಿಕೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಸದರಿ ಕಟ್ಟಡವನ್ನು ಶಾಲೆಗೆ ಬಳಸಿಕೊಳ್ಳಲು ಸಾಧ್ಯವಿರುವುದಿಲ್ಲ. ಪ್ರಸ್ತುತ ಈಗಾಗಲೇ ವಾರ್ಡ್ ನಂ.17 ರಲ್ಲಿ ಶಾಲಾ ಕಟ್ಟಡವನ್ನು ನಿರ್ಮಿಸಲು ರೂ. 500.00 ಲಕ್ಷಗಳಿಗೆ ಅನುಮೋದನೆ ದೊರೆತಿದ್ದು, ಈಗಾಗಲೇ ರಾಜರಾಜೇಶ್ವರಿನಗರ ವಿಭಾಗದಿಂದ ಜಾಬ್ ಸಂಖ್ಯೆ ಪಡೆದಿರುವ ಕೆಲವೊಂದು ಕಾಮಗಾರಿಗಳು ಫ್ರೀಜ್ ಆಗಿರುತ್ತವೆ. ಪಾಲಿಕೆಯ ಅನುದಾನದಲ್ಲಿ ಈಗಾಗಲೇ ಜಾಬ್ ಸಂಖ್ಯೆ ಪಡೆದು ಕಾರ್ಯಾದೇಶ ನೀಡದೆ ಫ್ರೀಜ್ ಆಗಿರುವ ಹಾಗೂ ಅವಶ್ಯಕತೆಯಿಲ್ಲದ ಕೆಲವೊಂದು ಕಾಮಗಾರಿಗಳನ್ನು ರದ್ದುಪಡಿಸಿ, ಸದರಿ ಅನುದಾನದಲ್ಲಿ ಶಾಲಾ ಕಟ್ಟಡ ನಿರ್ಮಿಸಲು ಅವಶ್ಯಕವಿರುವ ಹೆಚ್ಚುವರಿ ಅನುದಾನ ರೂ.500.00 ಲಕ್ಷಗಳಿಗೆ ಕಾಮಗಾರಿಗೆ ಹೊಸ ಜಾಬ್ ಸಂಖ್ಯೆ ನೀಡಲು ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ರವರು ತಮ್ಮ ಪತ್ರದ ಮುಖೇನ ಕೋರಿರುತ್ತಾರೆ ~~ಈ ಕೆಳಕಂಡ ಕಾಮಗಾರಿಗಳ ವಿವರವನ್ನು ಲಗತ್ತಿಸಿ ಕ್ರಮಸಂಖ್ಯೆ (1) ರಿಂದ (5) ರವರೆಗಿನ~~ ಕಾಮಗಾರಿಗಳಿಗೆ ಇದುವರೆಗೂ ಕಾರ್ಯಾದೇಶ ನೀಡಿರುವುದಿಲ್ಲ ಹಾಗೂ ಯಾವುದೇ ಬಿಲ್ಲುಗಳನ್ನು ಕ್ಲೇಮು ಮಾಡಿರುವುದಿಲ್ಲ. ಕ್ರಮ ಸಂಖ್ಯೆ (6) ರ ಕಾಮಗಾರಿಗೆ ಈ ಮುಂಚೆ ಕಾರ್ಯಾದೇಶ ನೀಡಿದ್ದರು ಸಹ ಯಾವುದೇ ಬಿಲ್ಲು ಕ್ಲೇಮು ಮಾಡಿರುವುದಿಲ್ಲವೆಂದು ದೃಢೀಕರಿಸಿ

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ .....

ಪುಟದ ಸಂಖ್ಯೆ (7)

ಕಡತದ ಸಂಖ್ಯೆ 746

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ವಾರ್ಡ್ 129, 42, 17ರ 6 ಕಾಮಗಾರಿಗಳನ್ನು ರದ್ದುಪಡಿಸಿ ವಾರ್ಡ್ ನಂ. 17 ರಲ್ಲಿ ಶಾಲಾ ಕಟ್ಟಡ ನಿರ್ಮಿಸಲು ಅವಶ್ಯಕವಿರುವ ಹೆಚ್ಚುವರಿ ಅನುದಾನ ಸೇರಿದಂತೆ ಸೇ jzAAvÉ **Construction of school building in ward No.17 J.P Park** ಕಾಮಗಾರಿಗೆ ಒಟ್ಟು ರೂ. 1000.00 ಲಕ್ಷಗಳಿಗೆ ಅನುದಾನ ನೀಡಿ ಹೊಸ ಜಾಬ್‌ಸಂಖ್ಯೆ ನೀಡಲು ಅನುಮೋದನೆ ಕೋರಿರುತ್ತಾರೆ ಮೇಲ್ಕಂಡ ಜಾಬ್ ಸಂಖ್ಯೆಗಳನ್ನು 2018-19 ರಲ್ಲಿ ಲೆಕ್ಕಶೀಷಿ 9 ಕೆ ಪಿ3525, ಪಿ1771, ಪಿ3520, ಪಿ3460 ಮತ್ತು 2019-20ರ ಲೆಕ್ಕಶೀಷಿ9ಕೆ ಪಿ3726 ಅಡಿ ಈಗಾಗಲೆ ಜಾಬ್ ಸಂಖ್ಯೆ ನೀಡಿಲಾಗಿದ್ದು, ಕಾಮಗಾರಿಗಳಿಗೆ ಟೆಂಡರ್ ಕರೆದು IFMS ತತ್ಕಾಂಶದ ಮೂಲಕ ಕಾರ್ಯಾದೇಶ ನೀಡದೆ ಇದ್ದುದರಿಂದ ಜಾಬ್ ಸಂಖ್ಯೆಗಳು ಬ್ಲಾಕ್ ಆಗಿರುತ್ತವೆ.ಸದರಿ ಜಾಬ್ ಸಂಖ್ಯೆಗಳು ವಿವಿಧ ಆಧಿ9ಕ ವಷ9ಗಳ ವಿವಿಧ ಲೆಕ್ಕಶೀಷಿ9ಕೆಗಳ ಅಡಿ ನೀಡಲಾಗಿರುವ ಜಾಬ್ ಸಂಖ್ಯೆಗಳಾಗಿರುತ್ತದೆ. ಆಯಾ ಆಧಿ9ಕ ವಷ9 ದಲ್ಲಿನ ಒಂದೇ ಲೆಕ್ಕಶೀಷಿ9ಕೆಯ ಜಾಬ್ ಸಂಖ್ಯೆಗಳನ್ನು ಮಾತ್ರ ಪ್ಯಾಕೇಜ್ ಮಾಡಲು ಅವಕಾಶವಿರುತ್ತದೆ. ಇತರೆ ಲೆಕ್ಕಶೀಷಿ9ಕೆಗಳನ್ನು ಹಾಗೂ ಇತರೆ ಆಧಿ9ಕ ವಷ9ದಲ್ಲಿನ ಜಾಬ್ ಸಂಖ್ಯೆಗಳನ್ನು ಒಗ್ಗೂಡಿಸಿ ಒಂದು ಪ್ಯಾಕೇಜ್ ಮಾಡಲು ಅವಕಾಶವಿರುವುದಿಲ್ಲ. ಸದರಿ ಪ್ರಸ್ತಾವನೆಯ ಬಗ್ಗೆ ಮುಂದಿನ ನಿರ್ದೇ 9 ಶನ ಕೋರಿ ಕಡತ ಸಲ್ಲಿಸಿದೆ

10/06/2021 1:16 PM

PRASANNA KUMAR PRAVEEN A.
(ASSISTANT CONTROLLER FINANCE)

Note # 4

Note # 2 ನ್ನು ಅವಗಾಹಿಸಲು ಕೋರುತ್ತಾ,

Note # 2 ರಲ್ಲಿ ವಿವರಿಸಲಾದಂತೆ, ಈಗಾಗಲೇ ವಾರ್ಡ್ ನಂ. 129, 42, 17ರ 6 ಕಾಮಗಾರಿಗಳಿಗೆ ಜಾಬ್‌ಸಂಖ್ಯೆಯನ್ನು ವಿವಿಧ ಆರ್ಥಿಕ ವರ್ಷಗಳಲ್ಲಿ ನೀಡಿದ್ದು,ಪ್ರಸ್ತುತ ಸದರಿ 6 ಜಾಬ್‌ಸಂಖ್ಯೆಗಳನ್ನು ರದ್ದುಪಡಿಸಿ ವಾರ್ಡ್ ನಂ. 17 ರಲ್ಲಿ ಶಾಲಾ ಕಟ್ಟಡ ನಿರ್ಮಿಸಲು Construction of school building in ward No.17 J.P Park ಪ್ಯಾಕೇಜ್ 1 ಕಾಮಗಾರಿಗೆ ಒಟ್ಟು ರೂ. 1000.00 ಲಕ್ಷಗಳಿಗೆ ಅನುದಾನ ನೀಡಿ ಒಂದು ಹೊಸ ಜಾಬ್‌ಸಂಖ್ಯೆ ನೀಡಲು ಮುಖ್ಯ ಅಭಿಯಂತರರು (ರಾಜರಾಜೇಶ್ವರಿ ನಗರ) ರವರು ಅನುಮೋದನೆ ಕೋರಿರುತ್ತಾರೆ.ಪರಿಶೀಲಿಸಲಾಗಿ, ಸದರಿ ಜಾಬ್ ಸಂಖ್ಯೆಗಳು ವಿವಿಧ ಆರ್ಥಿಕ ವರ್ಷ ಗಳ ವಿವಿಧ ಲೆಕ್ಕಶೀಷಿ ಕೆಗಳ ಅಡಿ ನೀಡಲಾಗಿರುವ ಜಾಬ್ ಸಂಖ್ಯೆಗಳಾಗಿರುತ್ತದೆ. ಆಯಾ ಆರ್ಥಿಕ ವರ್ಷ ದಲ್ಲಿನ ಒಂದೇ ಲೆಕ್ಕಶೀಷಿ ಕೆಯ ಜಾಬ್ ಸಂಖ್ಯೆಗಳನ್ನು ಮಾತ್ರ ಪ್ಯಾಕೇಜ್ ಮಾಡಲು ಅವಕಾಶವಿರುತ್ತದೆ. ಇತರೆ ಲೆಕ್ಕಶೀಷಿ ಕೆಗಳನ್ನು ಹಾಗೂ ಇತರೆ ಆರ್ಥಿಕ ವರ್ಷ ದಲ್ಲಿನ ಜಾಬ್ ಸಂಖ್ಯೆಗಳನ್ನು ಒಗ್ಗೂಡಿಸಿ ಒಂದು ಪ್ಯಾಕೇಜ್ ಮಾಡಲು ಅವಕಾಶವಿರುವುದಿಲ್ಲ.ಆದ್ದರಿಂದ ಸದರಿ ಪ್ರಸ್ತಾವನೆಯ ಬಗ್ಗೆ ಮುಂದಿನ ಸೂಕ್ತ ನಿರ್ದೇಶನ ಕೋರಿ ಕಡತ ಸಲ್ಲಿಸಿದೆ

11/06/2021 12:42 PM

RAJU S K
(CHIEF ACCOUNTS OFFICER)

Note # 5

There is a requirement to build a school to accomodate the children of the school that has been merged with Yeshwanthapura hospital. Therefore the school in ward 17 is proposed to be constructed, using existing job codes. There are total 6 job numbers involved and they are issued under different Pcodes in the years 2019 and 2020It has been decided to keep only one job number namely 017-19-000004. The work in this job number will be corrected as "Construction of Rajarajeshwari School (Kalpana Road) building in ward no 17, JP Park"The amount in these job codes is to be transferred

129-19-000022	1,00,00,000
129-19-000023	1,00,00,000
017-19-000011	1,00,00,000
017-20-000037	1,80,00,000
042-19-000024	10,00,000

ಪು.ತಿ.ನೋ

Scanned by TapScanner

ವಿಷಯ : ಬೃಹ ಕಾಮಗಾರಿಯನ್ನ ಪ್ರಕಟಿಸುವ ಬಗ್ಗೆ -

ಪುಟದ ಸಂಖ್ಯೆ ..... 8 .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

This amount of Rs 4.9 crs has to be transferred to job code number 017-19-000004.Therefore job number 017-19-000004 will be for Rs 9.9 crs and it will be for construction of Rajarajeshwari school in ward no 17.
File is submitted for approval of the above proposal

14/06/2021 12:23 PM

THULASI MADDINENI
(SPECIAL COMMISSIONER (FINANCE))

(20) **Note # 6**
Yes, approved.
15/06/2021 7:26 PM

GAURAV GUPTA
(CHIEF COMMISSIONER)

Digitally Signed

(21) **Note # 7**
Job code may be issued as approved
16/06/2021 2:14 PM

THULASI MADDINENI
(SPECIAL COMMISSIONER (FINANCE))

Note # 8
16/06/2021 3:21 PM

RAJU S K
(CHIEF ACCOUNTS OFFICER)

(22) ಕಂಡಿಕೆ (19) ರ ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ಹಾಗೂ ಕಂಡಕೆ (20) ರಲ್ಲಿ ಮಾನ್ಯ ಮುಖ್ಯ ಆಯುಕ್ತರು ರವರ ಆದೇಶದಂತೆ, 129-19-000022, 129-19-000023, 017-19-000011, 017-20-000037, 042-19-000024 ರಲ್ಲಿನ ಒಟ್ಟು ಮೊತ್ತ ರೂ 490.00 ಲಕ್ಷಗಳ ಅನುದಾನವನ್ನು 017-19-000004 ಜಾಬ್ ಸಂಖ್ಯೆಯಲ್ಲಿ ಹಾಲಿ ಇದ್ದ ರೂ 500.00 ಲಕ್ಷಗಳೊಂದಿಗೆ ವರ್ಗಾವಣೆ ಮಾಡಿಕೊಂಡು 017-19-000004 ಜಾಬ್‌ಸಂಖ್ಯೆಯಲ್ಲಿ ಬದಲಿ ಕಾಮಗಾರಿ ನಮೂದಿಸಿ, ರೂ 990.00 ಲಕ್ಷಗಳಿಗೆ ಪ್ರಮಾಣ ಪತ್ರವನ್ನು ನೀಡಲಾಗಿದೆ. ಕಾಮಗಾರಿ ಅನುಷ್ಠಾನ ಸಂಬಂಧ, ನಿಯಮಾನುಸಾರ ಕ್ರಮಕೈಗೊಳ್ಳಲು ಕಡತ ಕಳುಹಿಸಿದೆ.

Chief Accounts Officer
Bruhat Bangalore Mahanagara Palike
Bangalore

(23) EE (Project) RRN 19/6

(24) AEE.2

Scanned by TapScanner

ಸಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಸಲ್ಲಿಸಿದೆ.	ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿಷಯ:- Construction of Rajarajeshwari school (kalpana) building in ward No.17 J.P Park ಕಟ್ಟಡದ ಕಾಮಗಾರಿಗೆ ಯೋಜನಾ ಸಮಾಲೋಚಕರನ್ನು ನೇಮಿಸಿಕೊಳ್ಳಲು ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು(ಯೋಜನೆ) ವಿಭಾಗದ 2019-20ನೇ ಸಾಲಿನ ಬಿಬಿಎಂಪಿ ಆಯವ್ಯಯದ ಲೆಕ್ಕಶಿರ್ಷಿಕೆ ಪಿ-3460 ಅಡಿಯಲ್ಲಿ ರೂ.990.00 ಲಕ್ಷಗಳಿಗೆ ಅನುಮೋದನೆಗೊಂಡಿರುವ ಕಟ್ಟಡದ ಕಾಮಗಾರಿಯನ್ನು ವಾರ್ಡ್ ನಂ.17ರಲ್ಲಿ ಶಾಲಾ ಕಟ್ಟಡ ಅಭಾವವಿರುವುದರಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಮತ್ತು ಮಳೆಗಾಲ ಪ್ರಾರಂಭವಾಗುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಿ ತ್ವರಿತವಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ ಸದರಿ ಕಾಮಗಾರಿಗೆ ಅಂದಾಜು ಪಟ್ಟಿ, ನಕ್ಷೆ, ವಿನ್ಯಾಸಗಳನ್ನು, ಮಣ್ಣಿನ ಗುಣಮಟ್ಟ ಪರೀಕ್ಷೆ ಮಾಡಲು ಮತ್ತು ಈ ಕಾಮಗಾರಿಗೆ ಯೋಜನಾ ಸಮಾಲೋಚಕರನ್ನು ನಿಯೋಜಿಸಲು ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಕೋಟೆಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲು ಅನುಮೋದನೆಗಾಗಿ ಕಡತವನ್ನು ಮುಖ್ಯ ಅಭಿಯಂತರರು ರವರಿಗೆ ಸಲ್ಲಿಸಲು ತಮ್ಮ ಆದೇಶಕ್ಕಾಗಿ ಮಂಡಿಸಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು(ಯೋ)

ಕಾರ್ಯಪಾಲಕ ಅಭಿಯಂತರರು(ಯೋ)

ಮುಖ್ಯ ಅಭಿಯಂತರರು
ರಾಜರಾಜೇಶ್ವರಿ ನಗರ ವಲಯ

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಕಾ.ತ.1 ಜೆ.ಪಿ.ಪಾರ್ಕ್.17 ಸಾಮಾನ್ಯಕ್ಕೆ..... ಪುಟದ ಸಂಖ್ಯೆ ..... 10 - 74

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:

ವಿಷಯ:- Construction of Rajarajeshwari school (kalpana) building in ward No.17 J.P Park. ಕಾಮಗಾರಿಗೆ ಮತ್ತು ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಹಾಗೂ ತಾಂತ್ರಿಕ ಮಂಜೂರಾತಿ ನೀಡುವ ಬಗ್ಗೆ.

******

SL.No	Name of Work	Estimate Amount in Lakhs
1	Construction of Rajarajeshwari school (kalpana) building in ward No.17 J.P Park	990.00

25)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ರಾಜರಾಜೇಶ್ವರಿ ನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.17ರ ಜೆ.ಪಿ.ಪಾರ್ಕ್ ವಾರ್ಡಿನಲ್ಲಿ 2019-20ನೇ ಸಾಲಿನ ಬಿಬಿಎಂಪಿ ಅಯವ್ಯಯದ ಲೆಕ್ಕಶೀರ್ಷಿಕೆ ಪಿ-3460ಅಡಿಯಲ್ಲಿ ರೂ.990.00 ಲಕ್ಷಗಳಿಗೆ ಅನುಮೋದನೆಗೊಂಡಿರುವ, ಕಟ್ಟಡ ಕಾಮಗಾರಿಗೆ ಜಾಬ್‌ಸಂಖ್ಯೆ ದೊರೆತಿರುತ್ತದೆ. ಅದರಂತೆ ಸದರಿ ಕಾಮಗಾರಿಗೆ ಅಂದಾಜು ಪಟ್ಟಿ ನಕ್ಷೆ ವಿನ್ಯಾಸಗಳನ್ನು ತಯಾರಿಸಲು ಯೋಜನಾ ಸಮಲೋಚಕರನ್ನು ನಿಯೋಜಿಸಲು ಟೆಂಡರ್ ಕರೆದು ಕಾರ್ಯಾದೇಶ ನೀಡಲಾಗಿರುತ್ತದೆ. ಅದರಂತೆ ಅನುಮೋದನೆಗೊಂಡಿರುವ ಕಟ್ಟಡ ಕಾಮಗಾರಿಯನ್ನು ವಾರ್ಡ್ ನಂ.17ರಲ್ಲಿ ಶಾಲಾ ಕಟ್ಟಡ ಅಭಾವವಿರುವುದರಿಂದ, ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಮತ್ತು ಮಳೆಗಾಲ ಪ್ರಾರಂಭವಾಗುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಿ ತ್ವರಿತವಾಗಿ ಪೂರ್ಣಗೊಳಿಸ ಬೇಕಾಗಿರುವುದರಿಂದ, ಸದರಿ ಕಾಮಗಾರಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ಹಾಗೂ 2019-20ನೇ ಸಾಲಿನ ವಿದ್ಯುತ್ ದರಪಟ್ಟಿಯ ದರಗಳನ್ನು ಅಳವಡಿಸಿಕೊಂಡು ಅಂದಾಜು ಪಟ್ಟಿಯನ್ನು ರೂ.990.00ಲಕ್ಷಗಳಿಗೆ ತಯಾರಿಸಿದ್ದು, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ, ತಾಂತ್ರಿಕ ಮಂಜೂರಾತಿ ನೀಡಲು ಕೋರಿ ಕಡತ ಮಂಡಿಸಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು(ಯೋ)
ರಾಜರಾಜೇಶ್ವರಿ ನಗರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

30) EE(P) 27/7/2021
Executive Engineer (Project)
Bruhat Bangalore Mahanagar Palike
Rajarajeshwari Nagar Zone

ಪು.ತಿ.ನೋ

Scanned by TapScanner

ವಿಷಯ : [illegible]

ಪುಟದ ಸಂಖ್ಯೆ 11

ಕಡತದ ಸಂಖ್ಯೆ [illegible]

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(31)	ಮು.ಇಂ (ರಾಠಾನವ)

ಕಂಡಿಕೆ (28) ರಿಂದ (29) ರವರೆಗಿನ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, 2019-20ನೇ ಸಾಲಿನ ಪಾಲಿಕೆ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3460 ರಡಿ ಅನುಮೋದನೆಗೊಂಡಿರುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ, ತಾಂತ್ರಿಕ ಮಂಜೂರಾತಿ ನೀಡಲು ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರು ಕೋರಿರುತ್ತಾರೆ.

(32)

ಕ್ರ. ಸಂ.	ಕಾಮಗಾರಿಯ ಹೆಸರು	ಜಾಬ್‌ಕೋಡ್	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ
1	Construction of Rajarajeshwari School (Kalpana Road) Building in Ward No.17 J.P.Park	017-19-000004	8,30,81,531

ಕಾಮಗಾರಿ ಕೈಗೊಳ್ಳುವ ಮುನ್ನ ಈ ಕೆಳಕಂಡ ಅಂಶಗಳನ್ನು ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರು ದೃಢೀಕರಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ತಾಂತ್ರಿಕ ಮಂಜೂರಾತಿ ವಹಿಯ ಪುಟ ಸಂಖ್ಯೆ: 10-11 ರಲ್ಲಿ ಕ್ರಮ ಸಂಖ್ಯೆ: 33 ರಲ್ಲಿ ನಮೂದಿಸಲಾಗಿದ್ದು, ಸದರಿ ಕಾಮಗಾರಿಯನ್ನು ಅನುಮೋದಿಸಬಹುದಾಗಿದ್ದು, ತಮ್ಮ ಅವಗಾಹನೆಗೆ ಹಾಗೂ ತಮ್ಮ ಆದೇಶ ಕೋರಿ ಸಲ್ಲಿಸಿದೆ.

1. ಪ್ರಸ್ತಾಪಿತ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ವಿಶಿಷ್ಟ ವಿವರಣೆ / ವಿಶಿಷ್ಟತೆ ಸ್ಥಳಕ್ಕೆ ಅನುಗುಣವಾಗಿರುವುದರ ಬಗ್ಗೆ.
2. ಪ್ರಸ್ತಾಪಿತ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವ ಅನುಪಯುಕ್ತ (Debris) ವಸ್ತುಗಳ ಸಾಗಾಣಿಕೆಗೆ ಪೂರಕವಾಗಿ ವಲಯ ವ್ಯಾಪ್ತಿಯ ಅನುಮೋದಿತ (Notified Dumping Yard) ಗೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸುವ ಸ್ಥಳದಿಂದ Dumping Yard ಗೆ ಇರುವ ಅಂತರಕ್ಕೆ ಸಂಬಂಧಿಸಿದಂತೆ Lead Chart ನ್ನು ತಯಾರಿಸಿ ಅನುಮೋದನೆ ಪಡೆದುಕೊಳ್ಳುವ ಬಗ್ಗೆ. (33)
3. Non S.R ದರಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ಬಗ್ಗೆ.
4. ತೆರವುಗೊಳಿಸಿರುವ ಉಪಯುಕ್ತ ಸಾಮಾಗ್ರಿಗಳ ಬಗ್ಗೆ **MAS** ನ ವಹಿಯಲ್ಲಿ ದಾಖಲಿಸುವುದು ಹಾಗೂ ಈ ತರಹದ ಉಪಯುಕ್ತ ಸಾಮಾಗ್ರಿಗಳನ್ನು ಬೇರೆಡೆ ಉಪಯೋಗಿಸಿರುವ (ಮರು ಬಳಿಕೆ ಮಾಡಿರುವ) ಬಗ್ಗೆ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ದೃಢೀಕರಿಸಿಕೊಳ್ಳುವುದು.

ತಾಂತ್ರಿಕ ಸಹಾಯಕರು

(34) **ಮುಖ್ಯ ಅಭಿಯಂತರರು (ರಾರಾನವ)**

ಕಂಡಿಕೆ (33)ರಲ್ಲಿ ವಿವರಿಸಿರುವ ಅಂಶಗಳ ಬಗ್ಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರು ದೃಢೀಕರಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ತಾಂತ್ರಿಕ ಮಂಜೂರಾತಿ ಅನುಮೋದಿಸಿದೆ.

ಮುಖ್ಯ ಅಭಿಯಂತರರು (ರಾರಾನವ)

(35) **ಕಾರ್ಯಪಾಲಕ ಅಭಿಯಂತರರು (ಯೋಜನೆ)**

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ DTS ಅನುಮೋದನೆ ಹಿಂಪಡೆಯುವ ಬಗ್ಗೆ ಪುಟದ ಸಂಖ್ಯೆ -12-

ಕಡತದ ಸಂಖ್ಯೆ

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
36	ಕಂಡಿಕೆ ( ) ರಲ್ಲಿ ಮುಖ್ಯ ಅಭಿಯಂತರವ' ಂದ ತಾಂತ್ರಿಕ ಮಂಜೂರಾತಿ ದೊರೆತಿರುತ್ತದೆ. ಸದರಿ ಕಾಮಗಾರಿಯ ಡಿ.ಟಿ.ಎಸ್.ನ್ನು ಮಂಜೂರಾದ ಅಂದಾಜುಪಟ್ಟಿಯಂತೆ ತಯಾರಿಸಿ, ಅನುಮೋದನೆಗಾಗಿ ಹಾಗೂ ಸದರಿ ಕಾಮಗಾರಿಯನ್ನು ತ್ವರೀತವಾಗಿ ಕೈಗೊಳ್ಳಬೇಕಾಗಿರುವುದರಿಂದ ಅಲ್ಪಾವಧಿ ಟೆಂಡರ್ ಕರೆಯಲು ಅನುಮತಿಗಾಗಿ ಕಡತವನ್ನು ಮುಖ್ಯ ಅಭಿಯಂತರರು ರವರಿಗೆ ಕಡತವನ್ನು ಈ ಮೂಲಕ ಸಲ್ಲಿಸಿದೆ. ಕಾರ್ಯಪಾಲಕ ಅಭಿಯಂತರು(ಯೋಜನೆ) ರಾಜರಾಜೇಶ್ವರಿ ನಗರ ವಲಯ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
37	ಮು.ಅ (ಯೋ. ರಾ.ನಗರ)
38	ಕಂಡಿಕೆ (36) ರಲ್ಲಿ ಕಾ.ಪಾ.ಅ (ಯೋಜನೆ–ರಾರಾನವ) ವಿಭಾಗ ರವರು ಸಲ್ಲಿಸಿರುವ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, 2019–20ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–3460 ರಡಿ ಅನುಮೋದನೆಗೊಂಡಿರುವ **Construction of Rajarajeshwari School(Kalpana Road) Building in Ward No.17 J.P.Park(017-19-000004)** ಕಾಮಗಾರಿಯ ಡಿ.ಟಿ.ಎಸ್ ನ್ನು ತಾಂತ್ರಿಕ ಮಂಜೂರಾತಿಯಾದ ಅಂದಾಜು ಪಟ್ಟಿಯೊಂದಿಗೆ ಪರಿಶೀಲಿಸಿ, ಸದರಿ ಡಿ.ಟಿ.ಎಸ್ ಗೆ ಅನುಮೋದನೆ ನೀಡಲು ಕಡತ ಮಂಡಿಸಿದೆ. ಮು.ಅ(ರಾರಾನವ)
39	Chief Engineer Rajarajeshwarinagar Zone Bruhath Bangalore Mahanagara Palike
40	EE(Rajaji)
41	ABE-2

ಕಾರ್ಯಪಾಲಕ ಅಭಿಯಂತರರು (ರಾಜಾ) ಸ್ವೀಕೃತಿ ಸಂಖ್ಯೆ 181 ದಿನಾಂಕ 31.8.21

ಪು.ತಿ.ನೋ

Scanned by TapScanner

ವಿಷಯ : ತಾಂತ್ರಿಕ ಮಂಜೂರಾತಿ. ಕಾಮಗಾರಿ ಅಳವಡಿಕೆ ಮಂಜೂರಾತಿ ಕುರಿತು.

ಪುಟದ ಸಂಖ್ಯೆ ..... 13 .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:-

41) **ವಿಷಯ:-** Construction of Rajarajeshwari school (kalpana) building in ward No.17 J.P Park

ಉಲ್ಲೇಖ:- ಈ ಕಛೇರಿಯ ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/Proj/RRN/Tend/05/2021-22, D:28.07.2021

****

42)

ಕ್ರ.ಸಂ		ಸಂಕ್ಷಿಪ್ತ ವಿವರ	ದಿನಾಂಕ
1	ಅಂದಾಜು ಮೊತ್ತ	990.00 ಲಕ್ಷಗಳು	
2	ದರ ಪಟ್ಟಿ ಅಳವಡಿಕೆ	ಲೋಕೋಪಯೋಗಿ ಇಲಾಖೆಯ 2018-19ನೇ ದರಪಟ್ಟಿ, 2019-20ನೇ ಸಾಲಿನ ಲೋಕೋಪಯೋಗಿ ಇಲಾಖೆಯ ವಿದ್ಯುತ್ ದರಪಟ್ಟಿ ಮತ್ತು ಅನುಮೋದಿತ ದರಗಳು	--
3	ಜಾಬ್‌ಕೋಡ್ ಸಂಖ್ಯೆ	017-19-000004	–
4	ಲೆಕ್ಕಶೀರ್ಷಿಕೆ	ಪಿ-3460	–
5	ಆಡಳಿತಾತ್ಮಕ ಅನುಮೋದನೆ	ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ	–
6	ತಾಂತ್ರಿಕ ಮಂಜೂರಾತಿ	CE/RRN/TS No/33/2021-22	27.07.2021
7	ಕರಡು ಟೆಂಡರ್ ಅನುಮೋದನೆ	ಮುಖ್ಯ ಅಭಿಯಂತರರವರಿಂದ	27.07.2021
8	ಟೆಂಡರ್‌ಗಿಟ್ಟ ಮೊತ್ತ	RS. 8,30,81,531/-	–
9	ಟೆಂಡರ್ ಪ್ರಕಟಣೆ ಸಂಖ್ಯೆ	BBMP/EE/Proj/RRN/Tend/05/2021-22	28.07.2021
10	ದಿನಪತ್ರಿಕೆಗಳಲ್ಲಿ ಪ್ರಕಟಣೆ	ವಿಜಯವಾಣಿ ಮತ್ತು ಟೈಮ್ಸ್ ಆಫ್ ಇಂಡಿಯಾ	29.07.2021
11	ಟೆಂಡರ್ ಸಲ್ಲಿಕೆ ಅಂತಿಮ ದಿನಾಂಕ	18.08.2021	18.08.2021
12	ಟೆಂಡರ್ ಪದ್ಧತಿ	ದ್ವಿ-ಲಕೋಟೆ ಪದ್ಧತಿ	–
13	ಉಪಯೋಗಿಸಿದ ಸ್ಟಾಂಡರ್ಡ್ ಬಿಡ್ ಡಕ್ಯೂಮೆಂಟ್	KTPP Standard Bid Document KW-04	–
14	ಇ-ಪ್ರಕ್ಯೂರ್‌ಮೆಂಟ್ ಇಂಡೆಂಟ್ ನಂ.	BBMP/2021-22/BD/WORK_INDENT47950	–

44) ಟೆಂಡರ್ ಪ್ರಕಟಣೆ ವಿವರವೂ ಮೇಲ್ಕಂಡ ಕೋಷ್ಟಕರಲ್ಲಿ ವಿವರಿಸಿರುವಂತಿದ್ದು, ದಿನಾಂಕ:23.08.2021 ರಂದು ತೆರೆದ ದ್ವಿ-ಲಕೋಟೆ ತಾಂತ್ರಿಕ ಟೆಂಡರ್‌ನಲ್ಲಿ ಮೂವರು (೦೩)

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ತಾಂತ್ರಿಕ ಸಮಿತಿ ರಚನೆ ಮತ್ತು ಕಾಮಗಾರಿ ಕೈಗೆತ್ತಿಕೊಳ್ಳುವ ಬಗ್ಗೆ ಪುಟದ ಸಂಖ್ಯೆ -14-

ಕಡತದ ಸಂಖ್ಯೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಗುತ್ತಿಗೆದಾರರು ಭಾಗವಹಿಸಿದ್ದು, ಗುತ್ತಿಗೆದಾರರು ಸಲ್ಲಿಸಿರುವ ತಾಂತ್ರಿಕ ಅರ್ಹತೆ ವಿವರ ಕೆಳಗಿನಂತಿರುತ್ತದೆ.

ಕ್ರ.ಸಂ	ಗುತ್ತಿಗೆದಾರರ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.)	ತಾಂತ್ರಿಕ ಮೌಲ್ಯ ಮಾಪನ	ಷರಾ
1	CHANDUR RAMEGOWDA MANGALA (M R INFRA)	ರೂ. 8,30,81,531/-	ತಾಂತ್ರಿಕ ತುಲನಾತ್ಮಕ ವರದಿಯಲ್ಲಿ ವಿವರಿಸಿರುವಂತೆ ಮೌಲ್ಯ ಮಾಪನದ ಎಲ್ಲಾ ಅಂಶಗಳಲ್ಲು ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ.	–
2	KUNDUR VEERABHADRAPPA GANGAPPA (NANDI ASSOCIATES)		ತಾಂತ್ರಿಕ ತುಲನಾತ್ಮಕ ವರದಿಯಲ್ಲಿ ವಿವರಿಸಿರುವಂತೆ ಮೌಲ್ಯ ಮಾಪನದ ಎಲ್ಲಾ ಅಂಶಗಳಲ್ಲು ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಆದರೆ ಗುತ್ತಿಗೆದಾರರು ದಿ:06.09.2021ರಂದು ಕೋವಿಡ್-19ರ ಅಲೆಯ ಕಾರಣ ನೀಡಿ ನನ್ನ ಟೆಂಡರ್‌ನ್ನುರದ್ದುಗೊಳಿಸಬೇಕೆಂದು ಅವರ ತಲೆಬರಹ ಪತ್ರದಲ್ಲಿ ತಿಳಿಸಿರುತ್ತಾರೆ. ಅದರಂತೆ ಈ ಗುತ್ತಿಗೆದಾರರನ್ನು ಅನರ್ಹಗೊಳಿಸಲಾಗಿರುತ್ತದೆ.	–
3	SATHYA B R (R M ENTERPRISES)		ತಾಂತ್ರಿಕ ತುಲನಾತ್ಮಕ ವರದಿಯಲ್ಲಿ ವಿವರಿಸಿರುವಂತೆ ಮೌಲ್ಯ ಮಾಪನದ ಎಲ್ಲಾ ಅಂಶಗಳಲ್ಲು ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ.	

ಮೇಲ್ಕಂಡ ತಾಂತ್ರಿಕ ತುಲನಾತ್ಮಕ ವರದಿಯನ್ನು ತಮ್ಮ ಅವಗಾಹನೆಗೆ ಮಂಡಿಸುತ್ತಾ, ಸದರಿ ತಾಂತ್ರಿಕ ಬಿಡ್ಡಿನಲ್ಲಿ ಶ್ರೀ. CHANDUR RAMEGOWDA MANGALA (M R INFRA) ಮತ್ತು ಶ್ರೀ. SATHYA B R (R M ENTERPRISES) ರವರು ತಾಂತ್ರಿಕ ಅರ್ಹತೆ ಹೊಂದಿರುವುದರಿಂದ ಸದರಿಯವರ ತಾಂತ್ರಿಕ ಬಿಡ್‌ಗೆ ಅನುಮೋದನೆ ಹಾಗೂ ಇ-ಪ್ರಕ್ಯೂಟ್‌ಮೆಂಟ್ ವೇದಿಕೆ ಮುಖಾಂತರವೂ ಅಂಗೀಕರಿಸಿ ಸದರಿಯವರ ಆರ್ಥಿಕ ಬಿಡ್ಡನ್ನು ತೆರೆಯಲು ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು(ಯೋಜನೆ)

ರಾಜರಾಜೇಶ್ವರಿನಗರ, ಬಿ.ಬಿ.ಎಂ.ಪಿ

ಪು.ತಿ.ನೋ

Scanned by TapScanner

ವಿಷಯ :

ಪುಟದ ಸಂಖ್ಯೆ -15-

ಕಡತದ ಸಂಖ್ಯೆ .....

ಸೂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	ಕಾರ್ಯನಿರ್ವಾಹಕ ಅಭಿಯಂತರರು (ಪ್ರಾ) 8/9/2021. Executive Engineer (Project) Bruhat Bangalore Mahanagar Palike Rajarajeshwari Nagar Zone
	ಬಿಬಿ. ಜೋನ್ (ರಾಜರಾವಲ).
	TR M. Engg I Mtech Delegate
	EE(PR.RR) has submitted the for seeky approval of technical bid
	As per the recommendation of th(pr.RR), Among the three bidders two bidders are qualified;
	Accordy Technical bid in approved subject to Confirmation bid documents uploaded by the Appro. and permitted to open the Commercial bid
	ಕಾರ್ಯನಿರ್ವಾಹಕ ಅಭಿಯಂತರರು (ಪ್ರಾ) ಪಾಲಿಕೆ ಸಂಖ್ಯೆ 226 ದಿನಾಂಕ 13/09/21 ಬೃ.ಬೆಂ.ಮ.ಪಾ. ರಾಜರಾಜೇಶ್ವರಿ ನಗರ ವಲಯ
	ಮುಖ್ಯ ಅಧಿಯಂತರರು ರಾಜರಾಜೇಶ್ವರಿ ನಗರ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
49	CE/RD-PPP 13/9/2021

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ .....

..... ಪುಟದ ಸಂಖ್ಯೆ ..... 16 - ಗಿ

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:-

ವಿಷಯ:- Construction of Rajarajeshwari school (kalpana) building in ward No.17 J.P Park ರ ಕಾಮಗಾರಿಯ ಆರ್ಥಿಕ ಬಿಡ್‌ನ ಅನುಮೋದನೆ ಕೋರಿ.

ಉಲ್ಲೇಖ:- ಈ ಕಛೇರಿಯ ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/Proj/RRN/Tend/05/2021-22, D:28.07.2021

****

ಕ್ರ.ಸಂ		ಸಂಕ್ಷಿಪ್ತ ವಿವರ	ದಿನಾಂಕ
1	ಅಂದಾಜು ಮೊತ್ತ	990.00 ಲಕ್ಷಗಳು	
2	ದರ ಪಟ್ಟಿ ಅಳವಡಿಕೆ	ಲೋಕೋಪಯೋಗಿ ಇಲಾಖೆಯ 2018-19ನೇ ದರಪಟ್ಟಿ, 2019-20ನೇ ಸಾಲಿನ ಲೋಕೋಪಯೋಗಿ ಇಲಾಖೆಯ ವಿದ್ಯುತ್ ದರಪಟ್ಟಿ ಮತ್ತು ಅನುಮೋದಿತ ದರಗಳು	-
3	ಜಾಬ್‌ಕೋಡ್ ಸಂಖ್ಯೆ	017-19-000004	-
4	ಲೆಕ್ಕಶೀರ್ಷಿಕೆ	ಪಿ-3460	-
5	ಆಡಳಿತಾತ್ಮಕ ಅನುಮೋದನೆ	ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ	-
6	ತಾಂತ್ರಿಕ ಮಂಜೂರಾತಿ	CE/RRN/TS No/33/2021-22	27.07.2021
7	ಕರಡು ಟೆಂಡರ್ ಅನುಮೋದನೆ	ಮುಖ್ಯ ಅಭಿಯಂತರರವರಿಂದ	27.07.2021
8	ಟೆಂಡರ್‌ಗಿಟ್ಟ ಮೊತ್ತ	RS. 8,30,81,767.71/-	-
9	ಟೆಂಡರ್ ಪ್ರಕಟಣೆ ಸಂಖ್ಯೆ	BBMP/EE/Proj/RRN/Tend/05/2021-22	28.07.2021
10	ದಿನಪತ್ರಿಕೆಗಳಲ್ಲಿ ಪ್ರಕಟಣೆ	ವಿಜಯವಾಣಿ ಮತ್ತು ಟೈಮ್ಸ್ ಆಫ್ ಇಂಡಿಯಾ	29.07.2021
11	ಟೆಂಡರ್ ಸಲ್ಲಿಕೆ ಅಂತಿಮ ದಿನಾಂಕ	18.08.2021	18.08.2021
12	ಟೆಂಡರ್ ಪದ್ಧತಿ	ದ್ವಿ-ಲಕೋಟೆ ಪದ್ಧತಿ	-
13	ಉಪಯೋಗಿಸಿದ ಸ್ಟಾಂಡರ್ಡ್ ಬಿಡ್ ಡಕ್ಯೂಮೆಂಟ್	KTPP Standard Bid Document KW-04	-
14	ಇ-ಪ್ರಕ್ಯೂರ್‌ಮೆಂಟ್ ಇಂಡೆಂಟ್ ನಂ.	BBMP/2021-22/BD/WORK_INDENT47950	-

ಪು.ತಿ.ನೋ

Scanned by TapScanner

ವಿಷಯ :

ಪುಟದ ಸಂಖ್ಯೆ ..... 17 .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

5)

ಸದರಿ ಕಾಮಗಾರಿಯ ತಾಂತ್ರಿಕ ಬಿಡ್ಡಿಗೆ ಕಂಡಿಕೆ (48)ರಲ್ಲಿ ಮುಖ್ಯ ಅಭಿಯಂತರರವರು ಅನುಮೋದನೆ ನೀಡಿ, ಆರ್ಥಿಕ ಬಿಡ್‌ನ್ನು ತೆರೆಯಲು ಅನುಮೋದನೆ ನೀಡಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಇಬ್ಬರು ಗುತ್ತಿಗೆದಾರರಾದ CHANDUR RAMEGOWDA MANGALA (M R INFRA) ರವರ ಆರ್ಥಿಕ ಬಿಡ್ಡನ್ನು ದಿ:13.09.2021 ರಂದು ತೆರೆಯಲಾಗಿದ್ದು, ಬಿಡ್ಡಿನ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ವಿವರ	ಟೆಂಡರ್‌ಗಿಟ್ಟ ಮೊತ್ತ	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ	2018-19 ನೇ ಸಾಲಿನ ಮಂಜೂರಾದ ದರಪಟ್ಟಿ ದರಗಳಿಗೆ ಹೋಲಿಸಿದಾಗ	ಷರಾ
1	CHANDUR RAMEGOWDA MANGALA (M R INFRA)	ರೂ. 8,30,81,767.71/-	ರೂ. 9,53,50,340.76/-	14.77% ಹೆಚ್ಚುವರಿ	-
2	SATHYA B R (R M ENTERPRISES)		ರೂ. 9,90,34,659.82/-	19.20% ಹೆಚ್ಚುವರಿ	

52)

ಮೇಲಿನ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರಾದ Sri.CHANDUR RAMEGOWDA MANGALA (M R INFRA) & SATHYA B R (R M ENTERPRISES) ರವರು ಟೆಂಡರ್‌ನ್ನು ಸಲ್ಲಿಸಿದ್ದು, ಈ ಇಬ್ಬರಲ್ಲಿ ಅತೀ ಕಡಿಮೆ ದರವನ್ನು ನಮೂದಿಸಿರುವ Sri.CHANDUR RAMEGOWDA MANGALA (M R INFRA) ರವರ ಟೆಂಡರ್ಡ್ ಮೊತ್ತ ರೂ.**9,53,50,340.76/-** ಗಳಾಗಿದ್ದು, ಈ ಮೊತ್ತವು ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತ ರೂ.**8,30,81,767.71/-** ಗಳಿಗೆ ಹೋಲಿಸಿದಾಗ ಸದರಿ ಟೆಂಡರ್ ದರವು ಶೇಕಡಾ **14.77%** ರಷ್ಟು ಹೆಚ್ಚಾಗಿರುವುದು ಕಂಡು ಬಂದಿರುವುದರಿಂದ ಸದರಿ ಗುತ್ತಿಗೆದಾರರನ್ನು ದಿ:–13.09.2021ರಂದು ದರ ಸಂಧಾನಕ್ಕೆ ಆಹ್ವಾನಿಸಲಾಗಿತ್ತು. ಅದರಂತೆ ಸದರಿ ಗುತ್ತಿಗೆದಾರರಾದ **Sri.CHANDUR RAMEGOWDA MANGALA (M R INFRA)** ರವರು ದಿ:–14.06.2021ರ ಸಂಧಾನದ ನಂತರ ತಮ್ಮ ಟೆಂಡರ್ ಮೊತ್ತವನ್ನು ರೂ.**9,53,50,340.76/-**ಗಳ ಮೊತ್ತದಿಂದ ರೂ.**9,30,51,580/-** ಮೊತ್ತಕ್ಕೆ ಕಡಿಮೆ ಮಾಡಲು ಒಪ್ಪಿ ಪತ್ರದಮುಖೇನ ಕೋರಿರುತ್ತಾರೆ.

53)

ಸದರಿ ಸಂದಾನಿತ ಮೊತ್ತವಾದ ರೂ.**9,30,51,580/-**ಗಳನ್ನು ಮಂಜೂರಾದ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತ ರೂ.**8,30,81,767.71/-**ಗಳಿಗೆ ಹೋಲಿಸಿದಾಗ ಶೇ.**12%** ರಷ್ಟು ಹೆಚ್ಚಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಗುತ್ತಿಗೆದಾರರಾದ **Sri.CHANDUR RAMEGOWDA MANGALA (M R INFRA)** ರವರ ಸಂಧಾನಿತ ದರ ಮೊತ್ತ ರೂ.**9,30,51,580/-**ಗಳನ್ನು ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತ ರೂ.**8,30,81,767.71/-** ಗಳಿಗೆ ಹೋಲಿಸಿದಾಗ ಶೇ.**12%** ರಷ್ಟು ಹೆಚ್ಚಾಗಿರುವ ಸದರಿ ಟೆಂಡರನ್ನು ಮಾನ್ಯ ಆಯುಕ್ತರವರ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂ:ಬಿ12(1)ಪಿಆರ್/394/2020–21ರ, ದಿನಾಂಕ:04–02–2021ರ ನಡವಳಿಗಳಂತೆ ಟೆಂಡರ್ ಅನುಮೋದನೆ ಕೋರಿ ಕಡತವನ್ನು ಸಲ್ಲಿಸಿದೆ.

ಕಾರ್ಯಪಾಲಕ ಅಭಿಯಂತರರು(ಯೋಜನೆ)
ಸಂಖ್ಯೆ: 322/21-22
ದಿನಾಂಕ: 14/9/21
ರಾಜರಾಜೇಶ್ವರಿ ನಗರ ವಲಯ

14/9/20

ಕಾರ್ಯಪಾಲಕ ಅಭಿಯಂತರರು(ಯೋಜನೆ)
Executive Engineer (Project)
Bruhat Bangalore Mahanaga[illegible]alike
Rajarajeshwari Nagar Zone

55) ಮು.ಇಂ(ಥಾನವ)

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ ..... -18-

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

TA
ನಿಗದಿತ ಸಮಯದಲ್ಲಿ ಕೆಲಸ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಕಾಲಾವಧಿ ವಿಸ್ತರಣೆಗೆ ಕೋರಿಕೆ ಸಲ್ಲಿಸಿರುವುದಿಲ್ಲ.

ಪ್ರಸ್ತಾಪಿತ ವಿಷಯವು ಕಾಮಗಾರಿಯ ಟೆಂಡರ್‌ಗೆ ಅನುಮೋದನೆ ಕೋರಿರುವ ಕುರಿತು.

ಕಂಡಿಕೆ (50) ರಿಂದ (54) ರವರೆಗಿನ ಕಾ.ಪಾ.ಅ(ರಾರಾನಗರ–ಯೋಜನೆ) ವಿಭಾಗ ರವರು ಸಲ್ಲಿಸಿರುವ ಟೆಂಡರ್ ಪ್ರಸ್ತಾವನೆಯನ್ನು ತಮ್ಮ ಅವಗಾಹನೆಗಾಗಿ ತರುತ್ತಾ, 2019–20ನೇ ಸಾಲಿನ ಲೆಕ್ಕಶೀರ್ಷಿಕೆ P-3460ರ ಅನುದಾನಡಿ ಅನುನೋದನೆಗೊಂಡಿರುವ ಕಾಮಗಾರಿಯಾದ **"Construction of Rajarajeshwari School(Kalpana Road) Building in Ward No-17 J.P.Park(017-19-000004)** ರ ಕಾಮಗಾರಿಯ ಅಂದಾಜು ಮೊತ್ತ ರೂ.990.00 ಲಕ್ಷಗಳ ಕಾಮಗಾರಿಗೆ ದಿನಾಂಕ:28.07.2021 ರಂದು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿರುತ್ತಾರೆ.

ಸದರಿ ಟೆಂಡರ್‌ನ ಬಿಡ್‌ನ್ನು ದಿನಾಂಕ:23.08.2021 ರಂದು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರಾದ **(1)Sri.Chandur Ramegowda Mangala (M R Infra) (2)Sri.Kundur Veerabhadrappa Gangappa (Nandi Associates) & (3)Sri.Sathya B R (R M Enterprises)** ರವರು ಭಾಗವಹಿಸಿದ್ದು, ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. ಮುಮದುವರೆದು ಕ್ರ.ಸಂ.02 ರ ಗುತ್ತಿಗೆದಾರರು ದಿನಾಂಕ:06.09.2021 ರಂದು ಕಾ.ಪಾ.ಅ(ಯೋಜನೆ) ರವರಿಗೆ ಪತ್ರ ಸಲ್ಲಿಸಿ ಕೋವಿಡ್–19 ಅಲೆಯ ಕಾರಣ ನೀಡಿ ಸದರಿ ರವರ ಟೆಂಡರ್‌ನ್ನು ರದ್ದುಗೊಳಿಸಲು ಕೋರಿರುತ್ತಾರೆ.

ಸದರಿ ಟೆಂಡರ್‌ನ ಆರ್ಥಿಕ ಬಿಡ್‌ನ್ನು ದಿನಾಂಕ:13.09.2021 ರಂದು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ತಾಂತ್ರಿಕವಾಗಿ ಅರ್ಹರಾಗಿರುವ ಇಬ್ಬರು ಗುತ್ತಿಗೆದಾರರ ಪೈಕಿ ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರ ಟೆಂಡರ್ ಮೊತ್ತ ಈ ಕೆಳಗಿನಂತಿದೆ.

ಕ್ರ ಸ	ಟೆಂಡರ್‌ನಲ್ಲಿ ಭಾಗವಹಿಸಿ ತಾಂತ್ರಿಕವಾಗಿ ಅರ್ಹರಾಗಿರುವ ಬಿಡ್ದುದಾರರು	ಟೆಂಡರ್‌ಗಿಟ್ಟ ಮೊತ್ತ ರೂ.ಗಳಲ್ಲಿ	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ ರೂ.ಗಳಲ್ಲಿ (2018–19ನೇ ಸಾಲಿನ ದರಪಟ್ಟಿಯಂತೆ)	ದರ ಸಂಧಾನದ ನಂತರ ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತವನ್ನು ದಿನಾಂಕ: 2018–19ನೇ ಸಾಲಿನ ದರಪಟ್ಟಿಯ ದರಗಳಿಗೆ ಹೋಲಿಸಿದಾಗ
1	ಶ್ರೀಮತಿ.ಚಂದುರ್ ರಾಮೇಗೌಡ ಮಂಗಳ (ಎಂ.ಆರ್.ಇನ್‌ಫ್ರಾ)	ರೂ. 8,30,81,767.71	ರೂ. 9,53,50,340.76 ಶೇ.+14.77 ರಷ್ಟು ಹೆಚ್ಚು ದರಗಳು	ರೂ.9,30,51,580.00 ಶೇ.+12.00ರಷ್ಟು ಹೆಚ್ಚು ದರಗಳು

ಪು.ತಿ.ನೋ

Scanned by TapScanner

ವಿಷಯ :

ಪುಟದ ಸಂಖ್ಯೆ - 19 -

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
59	ಮುಂದುವರೆದು, ಸದರಿ ಎಲ್-1 ಗುತ್ತಿಗೆದಾರರಾದ ಶ್ರೀಮತಿ.ಚಂದುರ್ ರಾಮೇಗೌಡ ಮಂಗಳ (ಎಂ.ಆರ್.ಇನ್ಫ್ರಾ) ರವರು ದರ ಸಂಧಾನದ ನಂತರ ನಮೂದಿಸಿರುವ ಟೆಂಡರ್ ಮೊತ್ತವನ್ನು 2018-19ನೇ ಸಾಲಿನ ಎಸ್.ಆರ್. ದರಗಳಂತೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.+12.00 ರಷ್ಟು ಹೆಚ್ಚು ಇರುವ ಮೊತ್ತ ರೂ.9,30,51,580.00 (ರೂ.ಒಂಬತ್ತು ಕೋಟಿ ಮೂವತ್ತು ಲಕ್ಷದ ಐವತ್ತೊಂದು ಸಾವಿರದ ಐದು ನೂರ ಎಂಬತ್ತು ಮಾತ್ರ) ಗಳಿಗೆ ಅನುಮೋದನೆ ಕೋರಿರುತ್ತಾರೆ.
60	ಮುಂದುವರೆದಂತೆ ಮತ್ತೊಮ್ಮೆ ಈ ಕಛೇರಿಯಲ್ಲಿ ದರಸಂಧಾನ ಕೋರಿದ್ದು, ಸದರಿ ಕಾಮಗಾರಿಯು ಕಟ್ಟಡ ಕಾಮಗಾರಿಯಾಗಿರುವುದರಿಂದ ಮತ್ತು ಕಟ್ಟಡ ಸಾಮಾಗ್ರಿಗಳ ಬೆಲೆಯು ಹೆಚ್ಚಾಗಿರುವುದರಿಂದ ಇನ್ನು ಕಡಿಮೆ ದರಗಳಿಗೆ ಕಾರ್ಯನಿರ್ವಹಿಸಲು ಕಷ್ಟಕರವಾಗಿರುತ್ತದೆ ಎಂದು ಗುತ್ತಿಗೆದಾರರು ಮೌಖಿಕವಾಗಿ ತಿಳಿಸಿರುತ್ತಾರೆ. ಆದ್ದರಿಂದ ಸದರಿ ಕಟ್ಟಡ ಕಾಮಗಾರಿಗೆ ಸಂಧಾನಿತ ಮೊತ್ತಗಳಿಗೆ ಅನುಮೋದಿಸಲು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ತೀರ್ಮಾನಿಸಲು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಲು ಕಡತವನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸಲು ತಮ್ಮ ಆದೇಶಕ್ಕಾಗಿ ಸಲ್ಲಿಸಿದೆ.
61	ಮು.ಅ(ರಾರಾನವ) ಶಾಸಕರು ಕರೆಂದ ಕಾಮಗಾರಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸಲಾಗಿ, "Construction of Rajarajeshwari School(Kalpana Road) Building in ward no-17 J P Park" ಕಾಮಗಾರಿಗೆ 2019-20ನೇ ಸಾಲಿನ ಆಯವ್ಯಯದ ಪಿ-ಕೋಡ್-3460 ರಲ್ಲಿ ರೂ.990.00 ಲಕ್ಷಗಳಿಗೆ ಜಾಬ್ ಸಂಖ್ಯೆ:017-19-000004 ಯನ್ನು ಪಡೆಯಲಾಗಿದ್ದು. ಸದರಿ ಕಾಮಗಾರಿಯನ್ನು e-Procurement ಪದ್ಧತಿಯಂತೆ ಟೆಂಡರ್ ಕರೆಯಲಾಗಿರುತ್ತದೆ. 1. 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಗಳಂತೆ ಅಂದಾಜುಪಟ್ಟಿಯನ್ನು ತಯಾರಿಸಿ, ಸದರಿ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿಕ್ಷಿಸಿ ಮುಖ್ಯ ಅಭಿಯಂತರರು(ರಾ.ರಾ.ನಗರ)ರವರ ಕಂಡಿಕೆ(39)ರಲ್ಲಿನ ಡಿ.ಟಿ.ಎಸ್ ಅನುಮೋದನೆಯಂತೆ ಟೆಂಡರ್ ಕರೆಯಲಾಗಿರುತ್ತದೆ.

ಕಡತವನ್ನು ಪರಿಶೀಲಿಸಲಾಗಿ, ಸದರಿ ಕಾಮಗಾರಿಯು ಕಟ್ಟಡ ಕಾಮಗಾರಿಯಾಗಿರುವುದರಿಂದ ಮತ್ತು ಕಟ್ಟಡ ಸಾಮಾಗ್ರಿಗಳ ಬೆಲೆಯು ಹೆಚ್ಚಾಗಿರುವುದರಿಂದ ಇನ್ನು ಕಡಿಮೆ ದರಗಳಿಗೆ ಕಾರ್ಯನಿರ್ವಹಿಸಲು ಕಷ್ಟಕರವಾಗಿರುತ್ತದೆ ಎಂದು ಗುತ್ತಿಗೆದಾರರು ಮೌಖಿಕವಾಗಿ ತಿಳಿಸಿರುತ್ತಾರೆ. ಆದ್ದರಿಂದ ಸದರಿ ಕಟ್ಟಡ ಕಾಮಗಾರಿಗೆ ಸಂಧಾನಿತ ಮೊತ್ತಗಳಿಗೆ ಅನುಮೋದಿಸಲು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ತೀರ್ಮಾನಿಸಲು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಲು ಕಡತವನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸಲು ತಮ್ಮ ಆದೇಶಕ್ಕಾಗಿ ಸಲ್ಲಿಸಿದೆ.

Zonal Comm.

ಬೆಂಗಳೂರು ಮಹಾನಗರ ಪಾಲಿಕೆ ಸಂ: 2451 ದಿನಾಂಕ 18/9/19

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Construction of Rajarajeshwarinagar School (Kalpana Road) W. No-17 JP Park ಪುಟದ ಸಂಖ್ಯೆ -20- 139

ಕಡತದ ಸಂಖ್ಯೆ BC/6/PP/2451/21-22

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

2. ಮುಖ್ಯ ಅಭಿಯಂತರರ ಅನುಮೋದನೆಯಂತೆ e-Procurement ಮೂಲಕ ದಿನಾಂಕ:28.07.2021 ರಂದು **ಟೆಂಡರ್** ಕರೆಯಲಾಗಿರುತ್ತದೆ.
3. ದಿನಾಂಕ:23-08-2021ರಂದು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯಲಾಗಿ ಮೂರು ಬಿಡ್ಡುದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರು
   1. Chandur Ramegowda Mangala (M R Infra)
   2. Kundur Veerabhadrappa Gangappa (Nandi Associates)
   3. Sathya B R (R M Enterprises)
4. ಟೆಂಡರ್‌ನಲ್ಲಿ ಭಾಗವಹಿಸಿರುವ Chandur Ramegowda Mangala (M R Infra) & Sathya B R (R M Enterprises) ಇಬ್ಬರು ಬಿಡ್ಡುದಾರರು ಟೆಂಡರ್ ತಾಂತ್ರಿಕ ಮೌಲ್ಯ ಮಾಪನದಲ್ಲಿ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದು, ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆಹೊಂದಿರುತ್ತಾರೆ. (ತಾಂತ್ರಿಕ ಮೌಲ್ಯ ಮಾಪನದ ವಿವರಗಳು ಮತ್ತು ತುಲನಾತ್ಮಕ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ).
5. ಮುಖ್ಯ ಅಭಿಯಂತರರು ಕಂಡಿಕೆ 48 ರಲ್ಲಿನ ಅನುಮೋದನೆಯಂತೆ, ಆರ್ಥಿಕ ಬಿಡ್ ತೆರೆಯಲಾಗಿರುತ್ತದೆ ಸದರಿ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ	ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರು ನಮೂದಿಸಿರುವ ಮೊತ್ತಕ್ಕೆ ಹೋಲಿಸಿದಾಗ ಶೇಕಡವಾರು ಪ್ರಿಮಿಯಂ	ಷರಾ
1	Chandur Ramegowda Mangala (M R Infra)	8,30,81,767.71/-	9,53,50,340.76/-	(+)14.77 % ಹೆಚ್ಚು	ಎಲ್-1
2	Sathya B R (R M Enterprises)		9,90,34,659.82/-	(+)19.20% ಹೆಚ್ಚು	ಎಲ್-2

ಎಲ್-1 ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಲಾಗಿ ಸದರಿ ಕಾಮಗಾರಿಯು ಕಟ್ಟಡ ಕಾಮಗಾರಿಯಾಗಿರುವುದರಿಂದ ಮತ್ತು ಕಟ್ಟಡ ಸಾಮಾಗ್ರಿಗಳ ಬೆಲೆಯು ಹೆಚ್ಚಾಗಿರುವುದರಿಂದ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಗಳಿಗೆ ಟೆಂಡರ್ ಮೊತ್ತ ಹೊಲಿಸಿದಾಗ ಶೇ. (+12.00%) ರಷ್ಟು ಹೆಚ್ಚಿನ ದರಗಳಿಗೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿರುತ್ತಾರೆ. ಸದರಿ ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಕ್ರ.ಸಂ	ಗುತ್ತಿಗೆದಾರರ ಹೆಸರು	ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರು ನಮೂದಿಸಿರುವ ಮೊತ್ತಕ್ಕೆ ಹೋಲಿಸಿದಾಗ ಶೇಕಡವಾರು ಪ್ರಿಮಿಯಂ	ಗುತ್ತಿಗೆದಾರರೊಂದಿಗೆ ಸಂಧಾನ ಮಾಡಿರುವ ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ದರ ಸಂಧಾನದ ಮೊತ್ತಕ್ಕೆ 2018-19ನೇ ಎಸ್.ಆರ್ ದರಗಳಿಗೆ ಹೋಲಿಸಿದಾಗ
1.	Chandur Ramegowda Mangala (M R Infra)	9,53,50,340.76/-	(+)14.77 % ಹೆಚ್ಚು	9,30,51,580.00/-	(+)12.00% ಹೆಚ್ಚು

ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗಾಗಿ ತರುತ್ತಾ, ಮುಖ್ಯ ಅಭಿಯಂತರರು (ರಾ.ರಾ.ನಗರ)ರವರ ಕಂಡಿಕೆ(61)ರಲ್ಲಿನ ಶಿಫಾರಸ್ಸಿನಂತೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿದೆ.

1. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ, ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಲೆಅ/ಆಯವ್ಯಯ/2019-20/ಪಿಆರ್/11/2018-19 ದಿನಾಂಕ:12-06-2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಬಿಬಿಎಂಪಿ/ಆ/ಪಿ.ಆರ್/5287/2019-20 ದಿನಾಂಕ:05-11-2019 ಮತ್ತು ಬಿಬಿಎಂಪಿ/ಆ/ಪಿ.ಆರ್/6166/2019-20 ದಿನಾಂಕ:13-12-2019ರಲ್ಲಿನ ನಿರ್ದೇಶನಗಳನ್ನು / ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು.
2. ಗುತ್ತಿಗೆದಾರರು ಅವಶ್ಯಕ ದಾಖಲಾತಿಗಳನ್ನು ಇ-ಪೋಟಲ್‌ನಲ್ಲಿ ಪೂರ್ಣ ಪ್ರಮಾಣದಲ್ಲಿ ಅಪ್ಲೋಡ್ ಹಾಗೂ ಪ್ರಸ್ತಾವನೆಯಲ್ಲಿ ಕೆ.ಟಿ.ಪಿ.ಪಿ ಕಾಯ್ದೆಗೆ ವ್ಯತಿರಿಕ್ತವಾದ ಯಾವುದೇ ಅಂಶಗಳು ಇಲ್ಲದೆ ಇರುವ ಬಗ್ಗೆ ಹಾಗೂ ಸದರಿ ಟೆಂಡರ್ ಸಂಬಂಧ ಯಾವುದೇ ಮೇಲ್ಮನವಿ ಇಲ್ಲದೇ ಇರುವ ಬಗ್ಗೆ ಕಾರ್ಯಪಾಲಕ ಅಭಿಯಂತರರು ಕಾರ್ಯಾದೇಶಪತ್ರ ನೀಡುವ ಪೂರ್ವದಲ್ಲಿ ದೃಢಿಪಡಿಸಿಕೊಳ್ಳುವುದು.
3. ಟೆಂಡರ್ ಅಂದಾಜು ಪಟ್ಟಿಯಂತೆ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.
4. ಕಾಮಗಾರಿ ಮುಗಿದ್ದ ನಂತರ ಸದರಿ ಶಾಲಾ ಕಟ್ಟಡವನ್ನು ಪಾಲಿಕೆಯ ವಿದ್ಯಾ ಇಲಾಖೆಗೆ ಹಸ್ತಾಂತರಿಸತಕ್ಕದ್ದು.
4. ಕಾಮಗಾರಿಯ ಗುಣಮಟ್ಟದ ಸಂಬಂಧ ಯಾವುದೇ ದೂರು ಬಂದಲ್ಲಿ ಸಂಬಂಧ ಪಟ್ಟ ಅಧಿಕಾರಿಯಾವರೇ ನೇರಜಾವಬ್ದರರಾಗುವರು.
5. ಕಾಮಗಾರಿ ಮುನ್ನ ಹಾಗೂ ನಂತರದ ಜಿ.ಪಿ.ಎಸ್.ಯುಳ್ಳ ಛಾಯಚಿತ್ರಗಳನ್ನು ಸಲ್ಲಿಸುವುದು.

ಪು.ತಿ.ನೋ

Scanned by TapScanner

ವಿಷಯ :

ಪುಟದ ಸಂಖ್ಯೆ -21-

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

6. ಕಾಮಗಾರಿ ಕೈಗೊಳ್ಳುವ ಸಂಬಂಧ ಎಲ್ಲಾ ಮುಂಜಾಗೃತ ಕ್ರಮಗಳನ್ನು ಪಾಲಿಸತಕ್ಕದ್ದು
7. ಕೆ.ಟಿ.ಪಿ.ಪಿ ಕಾಯ್ದೆರನ್ವಯ ಕಾಮಗಾರಿಯನ್ನು ನಿಯಾಮನುಸಾರ ಕೈಗೊಳ್ಳತಕ್ಕದ್ದು.

66) ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹೆನಗೆ ತರುತ್ತಾ. **"Construction of Rajarajeshwari School(Kalpana Road) Building in ward no-17 J P Park"** ರ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಕರೆಯಲಾಗಿರುವ ಟೆಂಡರ್‌ನಲ್ಲಿ ಎಲ್-1 ರಾಗಿ ಆಯ್ಕೆಯಾದ Chandur Ramegowda Mangala (M R Infra)ರವರು ದರ ಸಂಧಾನದ ನಂತರ ನಮೂದಿಸಿರುವ ಮೊತ್ತವಾದ ರೂ. 9,30,51,580.00/-ಗಳು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಗಳಿಗೆ ಟೆಂಡರ್ ಮೊತ್ತ ಹೊಲಿಸಿದಾಗ ಶೇ. (+ 12.00%) ರಷ್ಟು ಹೆಚ್ಚಿನ ದರಗಳಿಗೆ ಕರೆಯಲಾಗಿರುವ ಟೆಂಡರ್‌ಗೆ ಆಡಳಿತಾತ್ಮಕ ಹಾಗೂ ಟೆಂಡರ್ ಅನುಮೋದನೆ ನೀಡಲು ಮಾನ್ಯ ಆಡಳಿತಗಾರರ ಮುಂದೆ ಟಿಪ್ಪಣಿ ಮಂಡಿಸಲು ಸೂಕ್ತ ಆದೇಶ ಕೋರಿದೆ.

18/9/21
ವಿಶೇಷ ಆಯುಕ್ತರು(ಆಸ್ತಿಗಳು) ಹಾಗೂ
ವಲಯ ಆಯುಕ್ತರು(ರಾ.ರಾ.ನಗರ)

63) ಮಾನ್ಯ ಮುಖ್ಯ ಆಯುಕ್ತರು

22/9/2021
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ZC (R.R.Nagar)

24/9/21
ವಿಶೇಷ ಆಯುಕ್ತರು (ಆಸ್ತಿಗಳು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ ಆಯುಕ್ತರು (ರಾ.ರಾ.ನಗರ) ಸ್ವೀಕೃತಿ ಸಂ 2538 ದಿನಾಂಕ 23/9/21

C-5

ಕೌನ್ಸಿಲ್ ಕಾರ್ಯದರ್ಶಿ ಕಛೇರಿ
ಸ್ವೀಕೃತಿ ಸಂಖ್ಯೆ 996
ದಿನಾಂಕ 24/09/2021

24/09/2021

65)

ಪ್ರಸ್ತಾವನೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಆಯುಕ್ತರವರು ದಿನಾಂಕ:22-09-2021ರಂದು ಕಂಡಿಕೆ (63) ಟಿಪ್ಪಣಿ ಪುಟ ಸಂಖ್ಯೆ (21)ರಲ್ಲಿ ಅನುಮೋದಿಸಿರುವ ಮೇರೆಗೆ, ವಲಯ ಆಯುಕ್ತರು (ರಾಜರಾಜೇಶ್ವರಿನಗರ) ವಲಯ ರವರು ದಿನಾಂಕ:24-09-2021ರಂದು ಮಂಡಿಸಿರುವ ಟಿಪ್ಪಣಿಯ ಕರಡು ನಡವಳಿಯನ್ನು ಕಡತದೊಂದಿಗೆ ಲಗತ್ತಿಸಿ, ಈ ಸಂಬಂಧ ನಿರ್ಣಯ ಕೈಗೊಳ್ಳಲು ಕೋರಿ ಕಡತ ಮಂಡಿಸಿದೆ.

ಅಡಳಿತಗಾರರ ಕಛೇರಿ ಸ್ವೀಕೃತಿ ಸಂ 348 ದಿನಾಂಕ 7/10/21

66)

67) ಮಾನ್ಯ ಆಡಳಿತಗಾರರು)

07/10/2021
ಕೌನ್ಸಿಲ್ ಕಾರ್ಯದರ್ಶಿ (ಪ್ರಭಾರ).
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

05/10/21

ಆಡಳಿತಗಾರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

68) ಕ.ರ.ಕ)

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Constitution of School Board ಪುಟದ ಸಂಖ್ಯೆ 22

W-17 J.P. Park ಕಡತದ ಸಂಖ್ಯೆ SC/E/PR/245/21-22

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿಷಯದ ಸಂಖ್ಯೆ:309/2021-22

ಪ್ರಸ್ತಾವನೆಗೆ ಸಂಬಂಧಿಸಿದಂತೆ, ವಲಯ ಆಯುಕ್ತರು (ರಾಜರಾಜೇಶ್ವರನಗರ ವಲಯ) ರವರ ಟಿಪ್ಪಣಿಯ ಮೇರೆಗೆ ಕೌನ್ಸಿಲ್ ಕಾರ್ಯದರ್ಶಿಗಳು ತಯಾರಿಸಿರುವ ಕರಡು ನಡವಳಿಯಲ್ಲಿ ತಮ್ಮ ಸೂಚನೆಯಂತೆ **ಕರಡು ತೀರ್ಮಾನವನ್ನು ಸಿದ್ದಪಡಿಸಿ** ಕಡತದಲ್ಲಿ ಲಗತ್ತಿಸಿ ತಮ್ಮ ಅವಗಾಹನೆಗೆ ತರುತ್ತಾ, ಮುಂದಿನ ಆದೇಶ ಕೋರಿ ಸಲ್ಲಿಸಿದೆ.

16/10/2021.
ವಿಶೇಷ ಕರ್ತವ್ಯಾಧಿಕಾರಿ

169 **ಮಾನ್ಯ ಆಡಳಿತಗಾರರು)**

ಆಡಳಿತಗಾರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

170 ವಿಶೇಷ ಕರ್ತವ್ಯಾಧಿಕಾರಿ 16/10/2021.

171 ಕೌನ್ಸಿಲ್ ಕಾರ್ಯದರ್ಶಿ)

ಪ್ರಸ್ತಾವನೆಗೆ ಸಂಬಂಧಿಸಿದಂತೆ, ದಿನಾಂಕ: 16 -10 -2021 ರ ಮಾನ್ಯ ಆಡಳಿತಗಾರರ ಅನುಮೋದನೆಯ ರೀತ್ಯಾ ನಡವಳಿಯ ಮೂರು ಪ್ರತಿಗಳ ಶುದ್ದ ಪ್ರತಿಯನ್ನು ತಯಾರಿಸಿ ಮಾನ್ಯ ಆಡಳಿತಗಾರರ ಸಹಿ ಕೋರಿ ಮಂಡಿಸಿದೆ.

16/10/2021
ಕೌನ್ಸಿಲ್ ಕಾರ್ಯದರ್ಶಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

172 **ಮಾನ್ಯ ಆಡಳಿತಗಾರರು)**

ಆಡಳಿತಗಾರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

173 ವಿಶೇಷ ಕರ್ತವ್ಯಾಧಿಕಾರಿಗಳು)

16/10/2021.

174 ಆ) ಕೌನ್ಸಿಲ್ ಕಾರ್ಯದರ್ಶಿ ಕಛೇರಿ
ಕ್ರಮ ಸಂಖ್ಯೆ 106
ದಿನಾಂಕ 18/10/2021
18/10/2021.

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Construction of Rajamahal Anganwadi School Block in Ward-17 ಪುಟದ ಸಂಖ್ಯೆ -23-

ಕಡತದ ಸಂಖ್ಯೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿಷಯ ಸಂಖ್ಯೆ: 309/2021-22:

(175) ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ:16-10-2021ರ ನಡವಳಿಗಳ ವಿಷಯ ಸಂಖ್ಯೆ:309/21-22ಕ್ಕೆ ಸಂಬಂಧಿಸಿದ ನಿರ್ಣಯವನ್ನು ಲಗತ್ತಿಸಿ ತಮ್ಮ ಅವಗಾಹನೆಗೆ ತರುತ್ತಾ ಸೂಕ್ತ ಕ್ರಮಕ್ಕಾಗಿ ಮಂಡಿಸಿದೆ.

18/10/2021
ಕೌನ್ಸಿಲ್ ಕಾರ್ಯದರ್ಶಿ (ಪ್ರಭಾರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(176) ಮಾನ್ಯ ಮುಖ್ಯ ಆಯುಕ್ತರು)

22/10/2021
ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

18/10/21

18/10/21

ಚ.ಅ(ಕ.ಕಾ.ನಸಸ)

27/X/21

(177) (EE(KN)

(178) ವಿಶೇಷ ಆಯುಕ್ತರು (ಆಸ್ತಿಗಳು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ: 2921
ದಿನಾಂಕ: 26/10/21
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

30/10/21
ಮುಖ್ಯ ಅಭಿಯಂತರರು
ರಾಜರಾಜೇಶ್ವರಿ ನಗರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(179)

(180) ಕಾಂಅ(ಯೋ-ಕಾರ್ಯನಿ)

for 3/11
6/11/2021

(181) AEE-3).

ಕ್ರಮಾಂಕ (176)ರ ಮುಖ್ಯ ಇಂಜಿನಿಯರ್ ಅವರ ಆದೇಶದಂತೆ ಸದರಿ L-1 ಸಂಸ್ಥೆಯಾದ M/S. M.R. Infra ಅವರಿಗೆ ಕಾಮಗಾರಿಯ ಕಾರ್ಯಾದೇಶ B.Y.ಆಯ್ಕೆ ಪತ್ರವನ್ನು ಕಳುಹಿಸಿ LoA ಆಗಿರುವ ವಿವರವನ್ನು ಸಲ್ಲಿಸಿದೆ.

6/11/2021

Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ 24

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

181) 2018-19ನೇ ಸಾಲಿನ ಪಾಲಿಕೆ ಅಯವ್ಯಯದಲ್ಲಿ ಲೆಕ್ಕಶಿರ್ಷಿಕೆ ಪಿ-3460 (Special Development Works) ಅಡಿಯಲ್ಲಿ ರಾಜರಾಜೇಶ್ವರಿನಗರ ವಲಯದ ವಾರ್ಡ್ ಸಂಖ್ಯೆ-17 ರಲ್ಲಿ Construction of Rajarajeshwari School (Kalpana) building in ward no.17 J.P.Park ರ ಕಾಮಗಾರಿಯ ಅಂದಾಜು ಪಟ್ಟಿಗೆ ದಿನಾಂಕ:16.10.2021 ರಂದು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯ ಸಂಖ್ಯೆ:309/2021-22ರಲ್ಲಿ ಮಾನ್ಯ ಆಡಳಿತಗಾರರು ಆಡಳಿತಾತ್ಮಕ ಅನುಮೋದನೆ ನೀಡಿರುವ ಮೇರೆಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಮಾನ್ಯ ಆಯುಕ್ತರವರ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂ:ಬಿ12(1)ಪಿಆರ್/394/2020-21, ದಿನಾಂಕ:04-02-2021 ರ ನಡವಳಿಗಳಂತೆ ಮೇಲಿನ ಕಾಮಗಾರಿಯ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ಪ್ರತಿಯನ್ನು ನೀಡಲು ತಮ್ಮ ಆದೇಶಕ್ಕಾಗಿ ಕಡತ ಮಂಡಿಸಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು(ಯೋಜನೆ)
ರಾಜರಾಜೇಶ್ವರಿ ನಗರ ವಲಯ.

182) ಕಾರ್ಯಪಾಲಕ ಅಭಿಯಂತರರು(ಯೋಜನೆ)

Scanned by TapScanner

ವಿಷಯ :

ಪುಟದ ಸಂಖ್ಯೆ ..... 25 .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

193

ಗುತ್ತಿಗೆದಾರರಾದ **M/S.M.R.Infra, No.123/30, 4th Floor, 1st Main Road, Rajajinagar Industrial Town, Bangalore-560010,** ರವರು ಟೆಂಡರ್‌ನ RS.**27,92,000.00 (Rupees Twenty Seven Lakhs Ninety Two Thousand Only)** ***vide FDR No.140031077810/1 dt:11.11.2021*** respectively from the ***Canara Bank, J.C.Road, Branch,*** Bangalore ಮುಖಾಂತರ ನೀಡಿದ್ದು, ಸದರಿಯವರು ಸಲ್ಲಿಸಿರುವ ಕರಾರು ಪತ್ರ ಮತ್ತು ಕಾರ್ಯಾದೇಶ ತಯಾರಿಸಿ, ಸಹಿಗಾಗಿ ಮತ್ತು ***FDR*** ಪ್ರಮಾಣ ಪತ್ರವನ್ನು ಲೆಕ್ಕ ಶಾಖೆಗೆ ಸಲ್ಲಿಸಲು ಆದೇಶ ಕೋರಿ ಮಂಡಿಸಿದೆ.

ಒಪ್ಪಿದೆ

12/11/2021

ಕಾರ್ಯಪಾಲಕ ಅಭಿಯಂತರರು(ಯೋಜನೆ)
ರಾಜರಾಜೇಶ್ವರಿನಗರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by TapScanner